


# ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು

ಆಶಿಷ್ ರಾಯ್‌ಚೂರ್

ಮುದ್ರಣ ಮತ್ತು ವಿತರಣೆ: **ಆಲ್ ಪೀಪ್‌ಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್, ಬೆಂಗಳೂರು**
ಪ್ರಥಮ ಪ್ರತಿ ಮುದ್ರಣ: ಸೆಪ್ಟೆಂಬರ್ 2007

ಕನ್ನಡಕ್ಕೆ ಭಾಷಾಂತರಿಸಿದವರು: ರವಿಕುಮಾರ್ ಎಂ.
ಮುಖಪುಟ ಮತ್ತು ವರ್ಣವಿನ್ಯಾಸ: ಕರುಣಾ ಜೆರೋಮ್, ಬ್ರೈಫೈಯ್ಡ್ ಡಿಸೈನ್ಸ್

Contact Information:
All Peoples Church & World Outreach
2nd Floor, No. 7M, 2nd Block,
HRBR Layout, Kalyan Nagar, Bangalore 560 043
Karnataka, INDIA

Phone: +91-80-65970617
Email: contact@apcwo.org
Website: www.apcwo.org

Unless otherwise indicated, all Scripture quotations are taken from the Holy Bible, New King James Version.

**ಉಚಿತ ವಿತರಣೆಗಾಗಿ**

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಸ್ನೇಹಿತರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ವಂದನೆಗಳು!

(Kannada Book - How to help your paster)



ಸಭಾಪಾಲಕರಿಗೆ ಸಹಾಯ

# ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು

# ವಿಷಯಸೂಚಿ


| | | |
|---|---|---|
| | ಪೀಠಿಕೆ | 1 |
| 1. | ಸಭಾಪಾಲಕರ ಮತ್ತು ಸಭಾ ಸಿಬ್ಬಂದಿಗಳ ಧ್ಯೇಯಗಳು | 4 |
| 2. | ನಿಮ್ಮ ಸಭಾ ಪಾಲಕರಿಗೆ ಹೇಗೆ ಸಹಾಯ ಮಾಡುವುದು | 8 |
| 3. | ನಿಮ್ಮ ಸಭಾಪಾಲಕರು ಮನುಷ್ಯರೇ | 23 |

# ಪೀಠಿಕೆ

''ನಿಮ್ಮ ಸಭಾ ಪಾಲಕರಿಗೆ ಹೇಗೆ ಸಹಾಯ ಮಾಡುವುದು'' ಎಂಬ ಸಂದೇಶವನ್ನು ಬಲವಾದ ಸಭೆಯನ್ನು ಕಟ್ಟಬೇಕೆಂಬ ಇಚ್ಛೆಯಿಂದಲೂ ಇದರಿಂದ ಪ್ರಬಲವಾದ ಜನರನ್ನು ಎಬ್ಬಿಸಬೇಕೆಂಬ ಇಷ್ಟದಿಂದಲೂ ನಾನು ಹಂಚಿಕೊಳ್ಳುತ್ತಿದ್ದೇನೆ. ಇದನ್ನು ಮಾಡುವುದರಿಂದ ನೀವು ನನ್ನ ಹೃದಯದ ಪ್ರೇರಣೆಯನ್ನು ಅರ್ಥಮಾಡುಕೊಳ್ಳುತ್ತಿದ್ದೀರಿ ಎಂಬುದಾಗಿ ನಾನು ನಂಬುತ್ತೇನೆ. ಈ ಪುಸ್ತಕದಲ್ಲಿ ಅರ್ಪಿಸುತ್ತಿರುವ ಸಂದೇಶವು ಯಾರ ವಿರುದ್ಧವಾಗಿಯೂ ವೈಯಕ್ತಿಕವಾಗಿಯೂ ಇಲ್ಲ. ನಾನು ಯಾರಿಗಾದರೂ ವೈಯಕ್ತಿಕವಾಗಿ ಸ್ಪಷ್ಟಗೊಳಿಸಬೇಕೆಂದಿದ್ದರೆ ಅದನ್ನು ಪುಸ್ತಕದ ಮೂಲಕ ಮಾಡದೇ ಒಬ್ಬರು-ಇನ್ನೊಬ್ಬರೊಡನೆ ಎಂಬಂತೆ ಮಾಡುತ್ತಿದ್ದೆನು.

ನಮ್ಮಲ್ಲಿ ಹಲವರು ತಂದೆತಾಯಂದಿರಾಗಿ ಮಕ್ಕಳನ್ನು ಬೆಳೆಸುವಾಗ ಅವರಿಗೆ ಏಟುಕೊಟ್ಟು ಬೆಳೆಸಿದ ಸಮಯವು ಉಂಟು. ಆದರೂ ಅವರಿಗೆ ಆಗಾಗ್ಗ ಹೆಚ್ಚಾದ ಪ್ರೀತಿಯನ್ನ ತೋರಿಸುತ್ತೇವೆ ! ಇದು ನಮ್ಮ ಮಕ್ಕಳನ್ನು ದ್ವೇಷಿಸುತ್ತೇವೆ ಎಂಬುದಾಗಿ ಅರ್ಥವಲ್ಲ. ಆದರೆ ಅವರು ಪ್ರಬಲವಾದ ಜನರಾಗಬೇಕೆಂಬುದು ನಮ್ಮ ಧ್ಯೇಯವಾಗಿರುತ್ತದೆ. ಅದೇ ರೀತಿಯಾಗಿ ಸಭೆಯಲ್ಲಿ ಬಲಿಷ್ಟ ಜನರನ್ನು ಎಬ್ಬಿಸಬೇಕಾದರೆ, ಅವರು ದೇವರ ಮನೆಯಲ್ಲಿ ಮಾಡಬೇಕಾದುದ್ದನ್ನು ಗ್ರಹಿಕೆಮಾಡಿಕೊಳ್ಳಲು ಉಪದೇಶ ನೀಡುವುದು ಅಗತ್ಯ.

**ಆದರೆ ಒಂದು ವೇಳೆ ನಾನು ತಡಮಾಡಿದರೂ ದೇವರ ಮನೆಯಲ್ಲಿ ಅಂದರೆ ಜೀವಸ್ವರೂಪನಾದ ದೇವರ ಸಭೆಯಲ್ಲಿ ನಡೆದುಕೊಳ್ಳಬೇಕಾದ ರೀತಿಯು ನಿನಗೆ ಗೊತ್ತಾಗಬೇಕೆಂದು ಈ ಸಂಗತಿಗಳನ್ನು ಬರೆದಿದ್ದೇನೆ. ಆ ಸಭೆಯು ಸತ್ಯಕ್ಕೆ ಸ್ತಂಭವೂ ಆಧಾರವೂ ಆಗಿದೆ.** (1 ತಿಮೊಥೆಯನಿಗೆ 3:15)

ಪೌಲನು, ತಿಮೊಥೆಯನಿಗೆ ಸ್ಥಳೀಯ ಸಭೆಯಲ್ಲಿ ಒಬ್ಬನು ನಡೆದುಕೊಳ್ಳಬೇಕಾದ ರೀತಿ, ಕ್ರಮವಾದ ಮಾರ್ಗದ ನಡವಳಿಕೆ ಕುರಿತು ಬರೆಯುತ್ತಾನೆ. ದೇವರ ಮನೆಯಲ್ಲಿ ನಡೆದುಕೊಳ್ಳಲು ಕ್ರಮವಾದ ಮಾರ್ಗವಿದೆ ಮತ್ತು ವಿಶ್ವಾಸಿಗಳು ಅದರ ಕುರಿತು ಉಪದೇಶ ಹೊಂದಬೇಕು ಎಂದು ಪೌಲನು ಹೇಳುತ್ತಾನೆ. ದುರಾದೃಷ್ಟಕರವಾಗಿ, ಇಂತಹ ವಿಷಯಗಳ ಬಗ್ಗೆ ಹೆಚ್ಚಿನ ಬೋಧನೆಗಳಿಲ್ಲ ಮತ್ತು ಪ್ರತಿಯೊಬ್ಬರು ತನಗೆ ಸರಿ ಎಂದು ತೋಚಿದ್ದನ್ನು ಮಾಡಲು ಉದ್ದೇಶಿಸುತ್ತಾನೆ. ಸಭೆಯಲ್ಲಿ ಜನರು ತಮ್ಮ

ಮನಸ್ಸಿನಲ್ಲಿರುವುದನ್ನು ಮಾಡುತ್ತಾರೆ. ಮತ್ತು ಸಭೆಯನ್ನು ಭಿನ್ನವಾದ ದಿಕ್ಕುಗಳೆಡೆಗೆ ಸೆಳೆಯುತ್ತಾರೆ, ಹೀಗಾಗಿ ಸಭೆಯು ಎತ್ತಕಡೆಗೂ ಹೋಗಲಾರದು! ಪ್ರತಿಯೊಬ್ಬರು ತಮಗೆ ಸರಿ ಕಂಡಂತೆ ಯೋಚಿಸಿ ಮಾಡಿದರೆ ಆಲಯದಲ್ಲಿ ಸಂಪೂರ್ಣವಾಗಿ ಗಲಿಬಿಲಿ ಮತ್ತು ಗೊಂದಲವಿರುವುದು. ಆದರೆ ದೇವರು ಗೊಂದಲದ ಕಾರಣನಲ್ಲ.

**ಸಹೋದರರೇ, ನಿಮ್ಮೆಲ್ಲರ ಮಾತು ಒಂದೇ ಆಗಿರಬೇಕು, ನಿಮ್ಮಲ್ಲಿ ಭೇದಗಳಿರಬಾರದು, ನೀವು ಒಂದೇ ಮನಸ್ಸೂ ಒಂದೇ ಅಭಿಪ್ರಾಯವೂ ಉಳ್ಳವರಾಗಿದ್ದು ಹೊಂದಿಕೆಯಿಂದಿರಬೇಕು ಎಂಬುದಾಗಿ ನಾನು ನಮ್ಮ ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿ ನಿಮ್ಮನ್ನು ಬೇಡಿಕೊಳ್ಳುತ್ತೇನೆ.** (1ಕೊರಿಂಥದವರಿಗೆ 1:10).

ಈ ವಚನದಲ್ಲಿ ಮನವಿ ಅಥವಾ ಸಲಹೆಗಳಿಲ್ಲ ಆದರೆ ದೇವರಿಂದಲೇ ಬಂದಂತಹ ಅಧಿಕಾರದಿಂದ ಬೇಡಿಕೊಳ್ಳುವ ಅಥವಾ ಒತ್ತಾಯಪಡಿಸುವ ವಿಷಯವಿದೆ. ಅಪೊಸ್ತಲನಾದ ಪೌಲನ ಮೂಲಕವಾಗಿ ಸ್ಥಳೀಯ ಸಭೆಗಳಿಗೆ ಕರ್ತನ ಆಜ್ಞೆಗಳು ಇಲ್ಲಿವೆ.

- ಅಸಾಧ್ಯಕರವಾಗಿ ಕಾಣಿಸಬಹುದು. ನೀವೆಲ್ಲರೂ ಒಂದೇ ವಿಷಯವನ್ನು ಮಾತನಾಡಬೇಕು.
- ನಿಮ್ಮ ಮಧ್ಯದಲ್ಲಿ ವಿಭಾಗಗಳಾಲಿ (ಒಡಕು ಅಥವಾ ಅಂತರಗಳಾಗಲಿ) ಇಲ್ಲದಿರಲಿ.
- ನೀವೆಲ್ಲರೂ ಒಟ್ಟಿಗೆ ಪರಿಪೂರ್ಣವಾಗಿ ಕೂಡಿರಿ. (ಸಂಪೂರ್ಣ ಒಪ್ಪಂದದಲ್ಲಿ)
- ನೀವೆಲ್ಲರೂ ಒಂದೇ ಮನಸ್ಸು ಮತ್ತು ಪ್ರಜ್ಞೆಯುಳ್ಳವರಾಗಿರಿ.
- ನೀವೆಲ್ಲರೂ ಒಂದೇ ನಿರ್ಧಾರ, ಉದ್ದೇಶ ಮತ್ತು ಅಭಿಪ್ರಾಯವುಳ್ಳವರಾಗಿರಿ.

ಕೊರಿಂಥ ಸಭೆಯನ್ನು ಗಮನಿಸಿದಾಗ ಅದು ಇಂದಿನ ನಮ್ಮ ಸಭೆಗಳಂತೆಯೇ ಇರುವುದನ್ನು ನೋಡುತ್ತೇವೆ. ಅಲ್ಲಿ ಅನೇಕ ತಪ್ಪು ವಿಷಯಗಳು ಇದ್ದವು. ಅಲ್ಲಿ ಕೆಲವರು ನಾನು ಪೌಲನವನು ಮತ್ತು ಕೆಲವರು ನಾನು ಅಪೊಲ್ಲೋಸನವನು ಎಂಬುದಾಗಿ ಹೇಳುತ್ತಿದ್ದರು. ಅಲ್ಲಿ ಮದುವೆಯ, ವಿಗ್ರಹಗಳಿಗೆ ಅರ್ಪಿತವಾದ ಭೋಜನ ಪದಾರ್ಥಗಳ, ಅನ್ಯಭಾಷೆಯಲ್ಲಿ ಮಾತಾಡುವ, ಪವಿತ್ರಾತ್ಮನ ವರ ಮುಂತಾದವುಗಳಲ್ಲಿ ಭಿನ್ನಾಭಿಪ್ರಾಯಗಳಿದ್ದವು. ಬಹಳ ಗಂಭೀರವಾದ ಅಪರಾಧವೆಂದರೆ, ಅವರು ಬೆಳೆಗಿನ ಉಪಹಾರವನ್ನು ಕರ್ತನ ಮೇಜಿನಲ್ಲಿ ಮಾಡಿದರು,

ಚಿಕ್ಕ ರೊಟ್ಟಿಯ ತುಂಡು ಅಥವಾ ಚಿಕ್ಕ ಪಾತ್ರೆಯ ದ್ರಾಕ್ಷಾರಸದೊಡನೆ ನಿಲ್ಲಿಸದೆ, ಇಡೀ ರೊಟ್ಟಿ ಮತ್ತು ಬೃಹತ್ ಗ್ಯಾಲನು (4.5 ಲೀಟರು) ಅಥವಾ ಪೂರ್ಣ ಪಾತ್ರೆ ದ್ರಾಕ್ಷಾರಸವನ್ನ ಬಯಸುವವರಾಗಿದ್ದರು. ಪೌಲನು ಅವರ ನಡವಳಿಕೆಗಳ ಕುರಿತು ಎಚ್ಚರಿಸಿ, ಅವರು ಸರಿಯಾದ ನಡತೆಯ ಮಾರ್ಗದಲ್ಲಿರಬೇಕೆಂದು ಅವರಿಗೆ ಬೋಧನೆ ನೀಡಬೇಕಾಯಿತು. (1 ಕೊರಿಂಥದವರಿಗೆ 11:17-33). ಪೌಲನು ಅವರನ್ನು ಒಂದೇ ವಿಷಯದ ಕುರಿತು ಮಾತಾಡಬೇಕು, ಮಧ್ಯದಲ್ಲಿ ವಿಭಾಗಗಳಿರಬಾರದು, ಎಲ್ಲರೂ ಒಟ್ಟಿಗೆ ಇದ್ದು ಸಂಪೂರ್ಣವಾಗಿ ಐಕ್ಯವಾಗಿರಬೇಕು ಮತ್ತು ಏಕ ಮನಸ್ಸು, ಪ್ರಜ್ಞೆ, ಅಭಿಪ್ರಾಯ ಮತ್ತು ನಿರ್ಧಾರ ಹೊಂದಿರಬೇಕೆಂಬುದಾಗಿ ವಿವಿಧ ಹಿನ್ನಲೆಗಳಿಂದ ಬಂದ ಅವರಿಗೆ ಉಪದೇಶ ನೀಡಬೇಕಾಯಿತು.

ಕರ್ತನು ಯಾವುದಾದರೊಂದನ್ನು ಮಾಡಲು ಆಜ್ಞೆ ನೀಡಿದರೆ ಅದು ಸಾಧ್ಯವಾಗುತ್ತದೆ. ಯಾಕೆಂದರೆ ಕರ್ತನು, ನಾವು ಮಾಡಲು ಸಾಧ್ಯವಾಗದೇ ಇರುವಂತಹವುಗಳನ್ನು ಮಾಡಲು ನಮಗೆ ಆಜ್ಞೆ ಕೊಡುವುದಿಲ್ಲ. ಆತನು ಅದನ್ನು ಮಾಡಿದರೆ ಅದು ಹಾಸ್ಯವಾಗುತ್ತದೆ. **ಪೌಲನು ಮಾತಾಡುತ್ತಿರುವ ಸಭೆಯ ಮಾದರಿಯಲ್ಲಿ ನಾವು ಇರಲು ಸಾಧ್ಯವಿದೆ ಮತ್ತು ಪ್ರತಿಯೊಬ್ಬ ಸಭಾಪಾಲಕರು, ತಮ್ಮ ಸಭೆಗೆ ಅಪೇಕ್ಷಿಸುವಂತಹದ್ದು ಇದಾಗಿದೆ.**

# 1

# ಸಭಾಪಾಲಕರು ಮತ್ತು ಸಭಾಸಿಬ್ಬಂದಿಗಳ ಧ್ಯೇಯಗಳು

ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು ಎಂಬುದನ್ನು ಕುರಿತು ಚರ್ಚಿಸುವ ಮೊದಲು, ಸಭಾಪಾಲಕರು ಮತ್ತು ಸಭಾಸಿಬ್ಬಂದಿಗಳ ಧ್ಯೇಯ (ಉದ್ದೇಶ)ಗಳ ಕುರಿತು ಅರ್ಥಮಾಡಿಕೊಳ್ಳಬೇಕು.

**ಇದಲ್ಲದೆ ನನ್ನ ಮನಸ್ಸು ಒಪ್ಪುವ ಪಾಲಕರನ್ನು ನಿಮಗೆ ದಯಪಾಲಿಸುವೆನು; ಅವರು ನಿಮ್ಮನ್ನು ಜ್ಞಾನ ವಿವೇಕಗಳಿಂದ ಪೋಷಿಸುವರು.** (ಯೆರೆಮೀಯ 3 : 15)

ದೇವರ ಮನಸ್ಸು ಒಪ್ಪುವ ಪಾಲಕರಾಗಿ ಸಭಾಪಾಲಕರು ಬೇರೆ ಯಾವುದೇ ಮೂಲಗಳನ್ನು ಉಪಯೋಗಿಸದೇ, ಬರೆಯಲ್ಪಟ್ಟ ದೇವರ ವಾಕ್ಯದೊಡನೆ ಮತ್ತು ಆತ್ಮಿಕ ಜ್ಞಾನದೊಡನೆ ದೇವರ ಜನರನ್ನು ಅರ್ಥಮಾಡಿಕೊಳ್ಳುವ ಮತ್ತು ಪೋಷಿಸುವ ಸದುದ್ದೇಶದಿಂದ ಕೂಡಿದವರಾಗಿದ್ದಾರೆ. ದೇವರ ಪ್ರವಿತ್ರಾತ್ಮನಿಂದ ಬರುವ ತಿಳುವಳಿಕೆಗಳನ್ನು ಸಭಾಪಾಲಕರು ಕೊಡುವವರಾಗಿದ್ದಾರೆ.

**ಆತನು ಕೆಲವರನ್ನು ಅಪೊಸ್ತಲರನ್ನಾಗಿಯೂ ಕೆಲವರನ್ನು ಪ್ರವಾದಿಗಳನ್ನಾಗಿಯೂ ಕೆಲವರನ್ನು ಸೌವಾರ್ತಿಕರನ್ನಾಗಿಯೂ ಕೆಲವರನ್ನು ಸಭಾಪಾಲಕರನ್ನಾಗಿಯೂ ಉಪದೇಶಿಗಳನ್ನಾಗಿಯೂ ಅನುಗ್ರಹಿಸಿದನು. ನಾವೆಲ್ಲರು ನಂಬಿಕೆಯಿಂದಲೂ ದೇವಕುಮಾರನ ವಿಷಯವಾದ ಜ್ಞಾನದಿಂದಲೂ ಉಂಟಾಗುವ ಐಕ್ಯವನ್ನು ಹೊಂದಿ ಪ್ರವೀಣತೆಗೆ ಬಂದವರಾಗಿ ಕ್ರಿಸ್ತನ ಪರಿಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟುವ ತನಕ ದೇವ ಜನರನ್ನು ಯೋಗ್ಯಸ್ಥಿತಿಗೆ ತರುವ ಕೆಲಸಕ್ಕೋಸ್ಕರವೂ ಸಭೆಯ ಸೇವೆಗೋಸ್ಕರವೂ ಕ್ರಿಸ್ತನ ದೇಹವು ಅಭಿವೃದ್ಧಿಯಾಗುವುದಕ್ಕೋಸ್ಕರವೂ ಆತನು ಇವರನ್ನು ಅನುಗ್ರಹಿಸಿದನು.** (ಎಫೆಸದವರಿಗೆ 3:11-13)

ಈ ವೇದ ಭಾಗವು ಸಭಾಪಾಲಕರು ಮತ್ತು ವಾಕ್ಯದ ಸುವಾರ್ತಾ ಸೇವೆಯಲ್ಲಿ ಭಾಗಿಗಳಾಗಿರುವವರ ಕೆಲಸದ ಕುರಿತು ವ್ಯಾಖ್ಯಾನಿಸಿದೆ. ಸಭಾಪಾಲಕನು ಸಭಾಸೇವೆಯ ಕೆಲಸ ಮಾಡುವುದಲ್ಲ - ನೀವು ಮಾಡಬೇಕು! ನೀವು ಒಬ್ಬ ಸಭಾಸೇವಕರು. ನಿಮ್ಮೊಂದಿಗೆ ನಿಮ್ಮ ಪಕ್ಕದಲ್ಲಿಯೇ ಸಭೆಯಲ್ಲಿ ಕುಳಿತಿರುವ ವ್ಯಕ್ತಿಯು ಸುವಾರ್ತೆ ಸೇವೆಯ ಕೆಲಸ ಮಾಡುವವರಾಗಿದ್ದೀರಿ, ಸಭಾಪಾಲಕರಲ್ಲ, ಬೋಧಕರಲ್ಲ, ಸೌವಾರ್ತಿಕರಲ್ಲ, ಪ್ರವಾದಿಗಳಲ್ಲ ಮತ್ತು ಅಪೊಸ್ತಲರಲ್ಲ- ಐದುಪಟ್ಟು ಸುವಾರ್ತಾ

ಸೇವೆಯ ಪಾತ್ರವು ಪವಿತ್ರವಾದವರನ್ನು ಸೇವೆಗಾಗಿ ಸಿದ್ಧಗೊಳಿಸುವುದಾಗಿದೆ. ಅವರು ಸುವಾರ್ತಾ ಸೇವೆ ಮಾಡಬೇಕು ಸಭಾಪಾಲಕರ 'ಕೆಲಸ'ವು ಸಾಮಾನ್ಯವಾಗಿ ಬಹಳ ಸುಲಭ ಇದು ನಿಮ್ಮನ್ನು ಸಜ್ಜುಗೊಳಿಸುವುದು ಮಾತ್ರವೇ ಆಗಿದೆ. ನೀವು ಕೆಲಸವನ್ನು ಹೊತ್ತುಕೊಂಡು ನಡೆಸುವವರು! ನೀವು ಬರೀ ಸಭೆಯ ಸದಸ್ಯರಲ್ಲ, ಆದರೆ ನೀವು ಸಹ ಸುವಾರ್ತಾ ಸೇವಕರೆ ನೀವು ''ಸಭಾ ಸದಸ್ಯ ಮನೋಭಾವ'' ಹೊಂದಿರಲು ಸಾಧ್ಯವಿಲ್ಲ. ನೀವು ಸರ್ವಶಕ್ತದೇವರ ಸುವಾರ್ತಾ ಸೇವಕರು ಮತ್ತು ಸುವಾರ್ತಾ ಸೇವೆಯ ಕೆಲಸ ಮಾಡಲು ಸುಸಜ್ಜಿತಗೊಂಡು ಕ್ರಿಸ್ತನ ದೇಹವನ್ನು ಕಟ್ಟಲು ನೀವು ಇಲ್ಲಿದ್ದೀರಿ. ''ಐಕ್ಯವನ್ನು ಹೊಂದಿ ಪ್ರವೀಣತೆಗೆ ಬಂದವರಾಗಿ ಕ್ರಿಸ್ತನ ಪರಿಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟುವವರೆಗೆ (ಎಫೆಸದವರಿಗೆ 4:13). ಸಭಾಪಾಲಕರು ಮತ್ತು ಸಭಾ ಸಿಬ್ಬಂದಿಗಳಾಗಿ, ಪವಿತ್ರರಾದವರನ್ನು ಕ್ರಿಸ್ತನ ಪರಿಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟುವ ತನಕ ಸಿದ್ಧಗೊಳಿಸುವುದು. ಆದುದರಿಂದ ಪವಿತ್ರವಾದವರು ಸುವಾರ್ತಾ ಸೇವೆಯ ಕೆಲಸ ಮಾಡಲು ಶಕ್ತರಾಗುವಂತೆ ಮಾಡುವುದು ನಮ್ಮ ಜವಬ್ಧಾರಿಯಾಗಿದೆ. ಪ್ರತಿಯೊಬ್ಬ ವಿಶ್ವಾಸಿಯು ಆತನ ರಾಜ್ಯದ ಸುವಾರ್ತಾ ಸೇವಕರಾಗಿರಬೇಕೆಂಬುದು ದೇವರ ಇಚ್ಛೆಯಾಗಿದೆ.

**ನಾವು ಆತನನ್ನು ಪ್ರಸಿದ್ಧಿಪಡಿಸುವವರಾಗಿ ಸಕಲರಿಗೂ ಬುದ್ಧಿ ಹೇಳುತ್ತಾ ಸರ್ವರಿಗೂ ಪೂರ್ಣಜ್ಞಾನವನ್ನು ಉಪದೇಶಿಸುತ್ತಾ ದೇವರ ಮುಂದೆ ಎಲ್ಲರನ್ನೂ ಕ್ರಿಸ್ತನಲ್ಲಿ ಪ್ರವೀಣರನ್ನಾಗಿ ನಿಲ್ಲಿಸುವದಕ್ಕೆ ಪ್ರಯತ್ನಿಸುತ್ತಿದ್ದೇವೆ.** (ಕೊಲೊಸ್ಸೆಯವರಿಗೆ 1:28)

ಸಭಾಪಾಲಕರು ಉಪದೇಶಿಸಲು ಮತ್ತು ಬೋಧಿಸಲು ಕಾರಣ ಮನರಂಜನೆ ನೀಡುವುದಕ್ಕಲ್ಲ ಆದರೆ ವಿಶ್ವಾಸಿಗಳನ್ನು ಕ್ರಿಸ್ತನಲ್ಲಿ ಪರಿಪೂರ್ಣಗೊಳಿಸಲು. ವೇದಭಾಗದಲ್ಲಿ 'ಟೆಲಿಯೋಸ್ (teleios)' ಎಂಬ ಗ್ರೀಕ್ ಪದವು ಉಪಯೋಗಿಸಲ್ಪಟ್ಟಿದೆ 'ಟೆಲಿಯೋಸ್' ಅಂದರೆ - ಸಂಪೂರ್ಣವಾಗಿ ಬೆಳೆದ ಮನುಷ್ಯ ಎಂದು ಅರ್ಥ. ಪ್ರತಿಯೊಬ್ಬ ವಿಶ್ವಾಸಿಯನ್ನು ಪ್ರಬುದ್ಧತೆಗೆ ತರವುದು ಮತ್ತು ಕ್ರಿಸ್ತನಲ್ಲಿ ಪರಿಪೂರ್ಣತೆಗೆ ಬೆಳೆಸುವುದು ನಮ್ಮ ಗುರಿಯಾಗಿದೆ. ನಾವು ಹಸುಗೂಸು (ಕಂದ)ಗಳನ್ನು ಸ್ವಾಗತಿಸುತ್ತೇವೆ ಆದರೆ ಅವರು ಅದೇ ರೀತಿ ಉಳಿದುಕೊಳ್ಳಬೇಕೆಂದು ಬಯಸುವುದಿಲ್ಲ. ಪ್ರತಿಯೊಬ್ಬ ವ್ಯಕ್ತಿಯನ್ನು ಕ್ರಿಸ್ತನಲ್ಲಿ ಪ್ರಬುದ್ಧ(ಪ್ರವೀಣ)ಗೊಳಿಸುವುದು ಸಭಾಪಾಲಕರ ಜವಾಬ್ಧಾರಿಯಾಗಿದೆ. ನಾವು ಅದನ್ನು ಮಾಡಲು ವಿಫಲವಾದರೆ ಸಭಾಪಾಲಕರ ಮತ್ತು ಸಭೆಯಲ್ಲಿನ ನಾಯಕರುಗಳಾಗಿ ನಮ್ಮ ಕರೆಯಲ್ಲಿ ನಾವು ವಿಫಲವಾಗುತ್ತೇವೆ.ಡ

## ಪ್ರತಿಯೊಬ್ಬ ವಿಶ್ವಾಸಿಯ ಜೀವಿತದಲ್ಲಿ ಈಡೇರಿಸಬೇಕಾದ ವಿಷಯಗಳು

ಪ್ರತಿಯೊಬ್ಬ ವಿಶ್ವಾಸಿಯ ಜೀವಿತದಲ್ಲಿ ನಾಲ್ಕು ವಿಷಯಗಳು ಈಡೇರುವುದನ್ನು ಸಭಾಪಾಲಕರು ನೋಡಲು ಇಚ್ಛಿಸಬೇಕು. ಈ ವಿಷಯಗಳಲ್ಲಿ ಅವರು ಬೆಳವಣಿಗೆ ಮತ್ತು ಪ್ರಗತಿಹೊಂದುವುದನ್ನು ನೋಡುವ ಇಚ್ಛೆಹೊಂದಿರಬೇಕು.

- **ವಾಕ್ಯ**

  ಸಭೆಯಲ್ಲಿ ಪ್ರತಿಯೊಬ್ಬ ವ್ಯಕ್ತಿಯು ವಾಕ್ಯದಲ್ಲಿ ಬಲಗೊಳ್ಳುವುದನ್ನು ನೋಡಲು ಸಭಾಪಾಲಕರು ಬಯಸಬೇಕು.

- **ಆತ್ಮ**

  ಸಭೆಯಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಆತ್ಮದಲ್ಲಿ ಬಲಗೊಳ್ಳುವುದನ್ನು ನೋಡಲು ಸಭಾಪಾಲಕರು ಅಪೇಕ್ಷಿಸಬೇಕು.

- **ಕ್ರಿಸ್ತನ-ಸಾದೃಶ್ಯ ಗುಣ.**

  ಸಭೆಯಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಕ್ರಿಸ್ತ ಸದೃಶ್ಯ ಗುಣ ನಡೆತೆಯ ಅಭಿವೃದ್ಧಿ ಪಡಿಸಿಕೊಳ್ಳುವುದನ್ನು ನೋಡಲು ಸಭಾಪಾಲಕರು ಅಪೇಕ್ಷಿಸಬೇಕು.

- **ಸೇವೆ**

ಪ್ರತಿಯೊಬ್ಬ ವ್ಯಕ್ತಿಯು ಸೇವೆಗೆ ಸಿದ್ಧಗೊಂಡಿರುವುದನ್ನು ನೋಡಲು ಸಭಾಪಾಲಕರು ಅಪೇಕ್ಷಿಸಬೇಕು.

**ನಾನೀಗ ಯಾರನ್ನು ಒಲಿಸಿಕೊಳ್ಳುತ್ತಾ ಇದ್ದೇನೆ? ಮನುಷ್ಯರನ್ನೋ? ದೇವರನ್ನೋ? ನಾನು ಮನುಷ್ಯರನ್ನು ಮೆಚ್ಚಿಸುವುದಕ್ಕೆ ಪ್ರಯತ್ನಿಸುತ್ತಾ ಇದ್ದೇನೋ? ಇನ್ನೂ ಮನುಷ್ಯರನ್ನು ಮೆಚ್ಚಿಸುವವನಾಗಿದ್ದರೆ ನಾನು ಕ್ರಿಸ್ತನ ದಾಸನಲ್ಲ** (ಗಲಾತ್ಯದವರಿಗೆ 1:10).

ನಾವು ಯಾವ ಮಟ್ಟಕ್ಕೆ ಸಭಾಪಾಲಕರು ಮತ್ತು ದೇವರ ಸುವಾರ್ತಾ ಸೇವಕರಾಗಲು ಕರೆಯಲ್ಪಟ್ಟಿದ್ದೇವೆ ಎಂದು ಅರ್ಥಮಾಡಿಕೊಳ್ಳಬೇಕು. ಗಲಾತ್ಯದವರಿಗೆ 1:10 ರ ವಚನದ ಪ್ರಕಾರ ನಾವು ಮನುಷ್ಯರನ್ನು ಮೆಚ್ಚಿಸುವವರಾದರೆ ನಾವು ದೇವರ ಸೇವಕರಲ್ಲ. ಸಭಾಪಾಲಕರಾಗಿ ನಾವು ಜನರನ್ನು ಸಂತೋಷಪಡಿಸಲು ಇರುವವರಲ್ಲ. ಆದ್ದರಿಂದ ನೀವು ಸಭೆಯನ್ನು ಸಂತೋಷಪಡಿಸಲು ಬಂದರೆ ನೀವು ತಪ್ಪಾದ ಸ್ಥಳಕ್ಕೆ

ಬಂದಿರುವವರಾಗಿರುತ್ತೀರಿ. ಯಾಕೆಂದರೆ ನಾವು ಮನುಷ್ಯನನ್ನು ಮಾತ್ರ ಮೆಚ್ಚಿಸುತ್ತೇವೆ, ನಾವು ದೇವರ ಸೇವಕರಾಗಲು ಸಾಧ್ಯವಿಲ್ಲ. ನಿಮ್ಮನ್ನು ಸಂತೋಷಪಡಿಸುವುದು ಮಾತ್ರವಲ್ಲದೆ ನಿಮ್ಮನ್ನು ಕಟ್ಟುವುದು ನಮ್ಮ ಗುರಿ. ಆದರೆ ಕಾರ್ಯಗತಿಯಲ್ಲಿ ನೀವು ಉಪವಸ್ತುವಾಗಿರುವ ಸಂತೋಷವನ್ನು ಪಡೆಯಬಹುದು. ಹಾಗೂ, ನೀವು ಸಭಾಪಾಲಕರನ್ನು ಮತ್ತು ಸಭಿಕರನ್ನು ಪ್ರೀತಿಸಲು ಪ್ರಾರಂಭಿಸಬಹುದು. ಆದರೆ ಅದು ಧ್ಯೇಯವಲ್ಲ. ಕ್ರಿಸ್ತನಲ್ಲಿ ನಿಮ್ಮನ್ನು ಪರಿಪೂರ್ಣರನ್ನಾಗಿ ನಿಲ್ಲಿಸುವುದೇ ನಮ್ಮ ಧ್ಯೇಯವಾಗಿದೆ. ನಾವು ಮನುಷ್ಯರನ್ನು ಮೆಚ್ಚಿಸುವವರಾದ ದಿನವೇ ನಾವು ದೇವರ ಸೇವಕರಾಗಿ ಸ್ಥಗಿತಗೊಳ್ಳುತ್ತೇವೆ. (ನಿಂತುಹೋಗುತ್ತೇವೆ).

- ದೇವರ ಮನಸ್ಸು ಒಪ್ಪುವ ಕುರುಬರಾಗಿ ''ಬೇರೆಯಾವುದೇ ಮೂಲವನ್ನು ಉಪಯೋಗಿಸದೆ ಬರೆಯಲ್ಪಟ್ಟ ದೇವರ ವಾಕ್ಯದ ತಿಳುವಳಿಕೆ ಮತ್ತು ಆತ್ಮಿಕವಾದ ಜ್ಞಾನದೊಡನೆ ದೇವಜನರನ್ನು ಪೋಷಿಸುವ'' ಸದುದ್ದೇಶದಿಂದ ಕೂಡಿದವರಾಗಿದ್ದಾರೆ.
- ಸಭಾಪಾಲಕರು ಸೇವೆಯ ಕೆಲಸವನ್ನು ಮಾಡಲು ಉದ್ದೇಶ ಹೊಂದಿದವರಲ್ಲ- ನೀವು ಸೇವೆಮಾಡಬೇಕು! ಸಂಕಲ್ಪಿಸಿಕೊಂಡಿರಬೇಕು ! ನೀವು ಸೇವಕರು.
- ಸಭಾಪಾಲಕರು ಪ್ರಸಂಗಿಸುವುದು ಮತ್ತು ಬೋಧಿಸುವುದು ಮನರಂಜನೆ ನೀಡುವುದಕ್ಕಲ್ಲ ಆದರೆ ವಿಶ್ವಾಸಿಗಳನ್ನು ಕ್ರಿಸ್ತನಲ್ಲಿ ಪರಿಪೂರ್ಣರನ್ನಾಗಿ ಅರ್ಪಿಸುವುಕ್ಕಾಗಿದೆ.

# 2

# ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು

ಮುಂದಿನ ಉಪದೇಶಗಳು ಸಭಾಪಾಲಕರಿಗೆ ಮಾತ್ರವಲ್ಲದೆ ನಿಮಗೆ ಸೇವೆ ಸಲ್ಲಿಸುವ ಸಭೆಯ ಸಿಬ್ಬಂದಿಗಳಿಗೂ ಅನ್ವಯಿಸುತ್ತವೆ

## ನಿಮ್ಮ ಸಭಾಪಾಲಕರ ಸಾಕ್ಷಿಯನ್ನು ಕಾಪಾಡಿಕೊಳ್ಳಲು ಸಹಾಯ ಮಾಡಿರಿ

**ಸಭಾಧ್ಯಕ್ಷನು ದೋಷಾರೋಪಣೆಯಿಲ್ಲದವನೂ, ಏಕಪತ್ನಿಯುಳ್ಳವನೂ, ಮದ್ಯಾಸಕ್ತಿಯಿಲ್ಲದವನೂ, ಜಿತೇಂದ್ರಿಯನೂ, ಮಾನಸ್ಥನೂ, ಅತಿಥಿಸತ್ಕಾರ ಮಾಡುವವನೂ ಬೋಧಿಸುವದರಲ್ಲಿ ಪ್ರವೀಣನೂ ಆಗಿರಬೇಕು.** (1 ತಿಮೊಥೆಯನಿಗೆ 3:2).

**ಸಭೆಯ ಹಿರಿಯನು ನಿಂದಾ ರಹಿತನೂ, ಏಕಪತ್ನಿಯುಳ್ಳವನೂ ಆಗಿರಬೇಕು, ಅವನ ಮಕ್ಕಳು ಕರ್ತನನ್ನು ನಂಬಿದವರಾಗಿರಬೇಕು; ಅವರು ದುರ್ಮಾರ್ಗಸ್ಥರೆನಿಸಿ ಕೊಂಡವರಾಗಲಿ, ಅಧಿಕಾರಕ್ಕೆ ಒಳಗಾಗದವರಾಗಲಿ ಆಗಿರಬಾರದು. ಯಾಕೆಂದರೆ ಸಭಾಧ್ಯಕ್ಷನು ದೇವರಮನೆವಾರ್ತೆಯವನಾಗಿರುವದರಿಂದ ನಿಂದಾರಹಿತನಾಗಿರಬೇಕು; ಅವನು ಸ್ವೇಚ್ಛಾಪರನಾದರೂ, ಮುಂಗೋಪಿಯಾದರೂ, ಕುಡಿದು ಜಗಳ ಮಾಡುವವನಾದರೂ, ನೀಚಲಾಭವನ್ನು ಅಪೇಕ್ಷಿಸುವವನಾದರೂ ಆಗಿರದೆ.** (ತೀತನಿಗೆ1:6,7).

1 ತಿಮೊಥೆಯನಿಗೆ 3:2ರ ಅನುಸಾರವಾಗಿ, ಆತ್ಮಿಕ ಮೇಲ್ವಿಚಾರಕರು ''ನಿಂದಾ ರಹಿತರಾಗಿರಬೇಕು''ಮತ್ತು ದೇವರ ಮನುಷ್ಯ ಅಥವಾ ಸ್ತ್ರೀಯಾಗಿರಲೂ ಇರುವ ಇತರ ಅಗತ್ಯ ಅರ್ಹತೆಗಳ ಕುರಿತು ವೇದಭಾಗವು ಮುಂದುವರೆದು ವ್ಯಾಖ್ಯಾನಿಸುತ್ತದೆ. ಆತ್ಮಿಕ ನಾಯಕರಿಂದ ದೇವರು ಕೇಳುವ ಮೊದಲನೆಯ ಅಥವಾ ಪ್ರಥಮ ಅರ್ಹತೆಯು, ಅವರು ನಿಂದಾರಹಿತನಾಗಿರಬೇಕೆಂಬುದು ಅಂದರೆ ಅವರಿಗೆ ಮತ್ತೊಬ್ಬನು ಕೈಬೆರಳು ಬೊಟ್ಟು ಮಾಡಿ ತೋರಿಸಬಾರದು ಮತ್ತು ದೋಷಾರೋಪಣೆ ಮಾಡಬಾರದು. ನಾಯಕರ ಸಾಕ್ಷಿಯು ನಿಶ್ಚಿತವಾಗಿ ಪರಿಪೂರ್ಣವಾಗಿರಬೇಕು.

**ನಿಂದೆಗೆ ಅವಕಾಶ ಕೊಡದೆ ಎಲ್ಲಾ ಸಂಗತಿಗಳಲ್ಲಿ ದೇವರ ಸೇವಕರೆಂದು ನಮ್ಮನ್ನು ಸಮ್ಮತರಾಗ ಮಾಡಿಕೊಳ್ಳುತ್ತೇವೆ. ನಾವು ಸಂಕಟಗಳಲ್ಲಿಯೂ, ಪೆಟ್ಟುಗಳಲ್ಲಿಯೂ, ಸೆರೆಮನೆಗಳಲ್ಲಿಯೂ ಬಹು ತಾಳ್ಮೆಯನ್ನು ತೋರಿಸುತ್ತೇವೆ.** (2 ಕೊರಿಂಥದವರಿಗೆ 6:3, 4).

ಸಭಾಪಾಲಕರು ಮತ್ತು ಸಭಾ ಸಿಬ್ಬಂದಿಗಳನ್ನು ''ಎಲ್ಲಾ ಸಂಗತಿಗಳಲ್ಲಿ ನಿಂದೆಗೆ ಅವಕಾಶ'' ಕೊಡದೇ ಇರುವ ಮಟ್ಟಕ್ಕೆ ದೇವರು ಕರೆದಿದ್ದಾನೆ. ನಾವು ನಿಂದಾರಹಿತ ಜೀವಿತ ಜೀವಿಸುವುದು ಅಗತ್ಯ. ಯಾವುದೇ ವಿಷಯದಲ್ಲಿ ನಿಂದೆಗೆ ಅವಕಾಶ ಕೊಡದಂತೆ ಸಭಾಸೇವೆಯನ್ನು ನಾವು ನಡೆಸಬೇಕು. ಆದ್ದರಿಂದ ನಮ್ಮ ಸೇವೆಯು ನಿಂದೆಗೆ ಗುರಿಯಾಗುವುದಿಲ್ಲ ಮತ್ತು ಇದನ್ನು ಮಾಡಲು ನಮಗೆ ನಿಮ್ಮ ಸಹಾಯ ಬೇಕು.

**ಬಹುಧನಕ್ಕಿಂತಲೂ ಒಳ್ಳೆಯ ಹೆಸರು ಉತ್ತಮ: ಬೆಳ್ಳಿ ಬಂಗಾರಕ್ಕಿಂತಲೂ ಸತ್ಕೀರ್ತಿಯು ಅಮೂಲ್ಯ** (ಜ್ಞಾನೋಕ್ತಿಗಳು 22:1).

ನಿಮ್ಮ ಸಭಾಪಾಲಕರ, ಸಾಕ್ಷಿಯನ್ನು ಕಾಪಾಡಿಕೊಳ್ಳಲು ನೀವು ಸಹಾಯ ಮಾಡುವ ಕೆಲವು ಉದಾಹರಣೆಗಳನ್ನು ನಾವು ಅವಲೋಕಿಸೋಣ.

- ನೀನು ಮಹಿಳೆ (ಸ್ತ್ರೀ)ಆಗಿದ್ದರೆ, ನಿಮ್ಮ ಪಾಲಕರನ್ನು ಎಲ್ಲರು ಇರುವ ವೇಳೆಯಲ್ಲಿ ಅವರ ಕಛೇರಿಯಲ್ಲಿ ಭೇಟಿಮಾಡಿರಿ. ಪ್ರತಿಕೂಲ ಸ್ಥಳಗಳಲ್ಲಿ ಮತ್ತು ಪ್ರತಿಕೂಲ ಸಮಯಗಳಲ್ಲಿ ನಿಮ್ಮ ಸಭಾಪಾಲಕರನ್ನು ಭೇಟಿ ಮಾಡಲು ಕೇಳಬೇಡಿರಿ. ನೀವು ಬಹಳ ಯಥಾರ್ಥವಾದ ಅಗತ್ಯತೆ ಹೊಂದಿರಬಹುದು. ಆದರೆ ಪ್ರತಿಕೂಲ ಸ್ಥಳಗಳಲ್ಲಿ ಭೇಟಿಮಾಡಲು ಕೇಳುವ ಮೂಲಕ ನಿಮ್ಮ ಸಭಾಪಾಲಕರಿಗೆ ಅನಾನುಕೂಲತೆಯನ್ನುಂಟು ಮಾಡಬೇಡಿರಿ. ಹೊರಗಿನವರಿಗೆ ಇದು ಹೇಗೆ ಕಾಣಿಸಬಹುದೆಂಬುದಾಗಿ ಆಲೋಚಿಸಿರಿ - ಸಭಾಪಾಲಕರು ಸಾರ್ವಜನಿಕ ಸ್ಥಳಗಳಲ್ಲಿ ಒಬ್ಬ ಸ್ತ್ರೀಯನ್ನು ಭೇಟಿಮಾಡಿ ಕಾಫಿ ಕುಡಿಯುವುದರೊಡನೆ ಸಲಹೆಗಳನ್ನು ನೀಡುತ್ತಿರಬಹುದು. ಆದರೆ ಸಭಾಪಾಲಕರನ್ನು ತಿಳಿದಿರುವವರು ಇದನ್ನು ನೋಡುವಾಗ, ಸಭೆಯ ಸಭಾಪಾಲಕರಾಗಿ ಮದುವೆಯಾಗಿ ಮಕ್ಕಳಿದ್ದು ಬೇರೊಬ್ಬ ಸ್ತ್ರೀಯೊಡನೆ ಒಬ್ಬರೇ ಮಾಡುತ್ತಿರುವುದೇನು ಎಂಬುದಾಗಿ ಆಶ್ಚರ್ಯಪಡಬಹುದು. ಸಲಹೆಯ ಕಾಲವು ಕೆಲವು ವೇಳೆ ಇನ್ನೂ ದೀರ್ಘವಾಗುವುದನ್ನು ಊಹಿಸಿರಿ. ಆಗ ಸಭಾಪಾಲಕರ ಸಾಕ್ಷಿಯು ಪೇಚಾಟದಲ್ಲಿ ಸಿಲುಕುತ್ತದೆ. ನಿಮ್ಮ ತೊಂದರೆಗಳು ಎಷ್ಟೇ ಗಂಭೀರವಾದರೂ ನಿಮ್ಮ ಸಭಾಪಾಲಕರನ್ನು ಕಛೇರಿಯಲ್ಲಿ ಸಂದರ್ಶಿಸುವುದು ಕ್ರಮವಾದುದು. ಇಲ್ಲವಾದರೆ ನೀವು ಒಬ್ಬ ದೇವರ ಮನುಷ್ಯನ ಸಾಕ್ಷಿಯನ್ನು ನಾಶಮಾಡುತ್ತೀರಿ.

- ನೀವು ಒಬ್ಬ ಸ್ತ್ರೀ ಆಗಿದ್ದರೆ, ಮಹಿಳಾ ಸಭಾಸೇವಕಿ ಸಭಾನಾಯಕಿಯ ಸಹಾಯ ಪಡೆಯುವುದು ಬಹಳ ಉತ್ತಮವಾದದ್ದು.
- ಸಭಾಪಾಲಕರ ಅಥವಾ ಸಭೆಯ ಬಗ್ಗೆ ನಿಮಗೆ ಸಂಪೂರ್ಣವಾಗಿ ಖಚಿತತೆ ಇಲ್ಲದಿದ್ದರೆ ನೀವು ಏನನ್ನೂ ಹೇಳಬೇಡಿರಿ ಅಥವಾ ಯಾವುದಾದರೊಂದರಲ್ಲೂ ಹಕ್ಕು ಸಾಧಿಸಬೇಡಿರಿ. ನೀವು ಹೇಳಲು ಬಯಸುವುದರಲ್ಲಿ ನಿಮಗೆ ಸಂಪೂರ್ಣ ಖಚಿತವಿಲ್ಲದಿದ್ದರೆ, ನೀವು ಅದನ್ನು ಹೇಳಲೇಬೇಡಿರಿ ಉದಾಹರಣೆಗೆ, ನಿಮ್ಮ ಸಭಾಪಾಲಕರು ಅಮೇರಿಕಾ ದೇಶದಲ್ಲಿ ವಾಸಮಾಡಿದ್ದು ಬಳಿಕ ಭಾರತಕ್ಕೆ ಹಿಂದಿರುಗಿದರೆ, ಸಭಾಸೇವೆಗಾಗಿ ಅಲ್ಲಿಂದ ಡಾಲರ್‌ಗಳ ಬಂಡವಾಳ ಬರುತ್ತದೆ ಎಂಬುದಾಗಿ ಊಹಿಸಬಾರದು. ಅಂತಹ ವಿಷಯಗಳನ್ನು ಹೇಳುವ ಮೊದಲು ನಿರ್ದಿಷ್ಟ ವಿಷಯಗಳ ಬಗ್ಗೆ ಪರಿಪೂರ್ಣವಾಗಿ ತಿಳಿದಿರಿ! ನಮ್ಮ ಸಭೆಯ ವಿಷಯದಲ್ಲಿ ಶೇಕಡಾ ತೊಂಭತ್ತೊಂಬತ್ತರಷ್ಟು(99) ಭಾರತದ - ನಮ್ಮ ಸಭೆಯ ದಶಮಭಾಗ, ಕಾಣಿಕೆಗಳು ಮತ್ತು ಕೊಡುಗೆಗಳ ಮೂಲಕವಾಗಿ ಬರುವ ಹಣವಾಗಿದೆ ಪ್ರಪಂಚದ ಬೇರೆ ಯಾವುದೇ ಭಾಗಗಳ ಸಭೆಗಳು ನಮಗೆ ಸಹಾಯ ಮಾಡುತ್ತಿಲ್ಲ.
- ನಿಮ್ಮ ಸಭಾಪಾಲಕರು ಅಥವಾ ಸಭೆಯು ಮಾಡುತ್ತಿರುವವುಗಳ ಕುರಿತು ದಯಮಾಡಿ ಅತಿಶಯ ಮಾಡಬೇಡಿರಿ (ಉತ್ಪ್ರೇಕ್ಷಿಸದಿರಿ). ಉದಾಹರಣೆಗೆ, ನಿಮ್ಮ ಸಭೆಯು ಶಿಶುವಿಹಾರವನ್ನ ನಡೆಸುತ್ತಿದ್ದು ಅದರಲ್ಲಿ 8 ಮಕ್ಕಳಿದ್ದರೆ ಸಭೆಯು ಅನೇಕ ಮಕ್ಕಳಿರುವ ಬಹಳ ದೊಡ್ಡದಾದ ಅನಾಥಾಲಯವನ್ನು ನಡೆಸುತ್ತಿದೆ''ಎಂಬುದಾಗಿ ಅತಿಶಯ ಮಾಡಿ ಹೇಳಬೇಡಿರಿ.

## ನಿಮ್ಮ ಸಭಾಪಾಲಕರ ಸಮಯ ಕಾಪಾಡಲು ಸಹಾಯ ಮಾಡಿರಿ

**ಆದಕಾರಣ ನೀವು ನಡೆದುಕೊಳ್ಳುವ ರೀತಿಯನ್ನು ಕುರಿತು ಚೆನ್ನಾಗಿ ನೋಡಿಕೊಳ್ಳಿರಿ ಜ್ಞಾನವಿಲ್ಲದವರಾಗಿರದೆ ಜ್ಞಾನವಂತರಾಗಿ, ಈ ದಿನಗಳು ಕೆಟ್ಟವುಗಳಾಗಿವೆ, ಆದದರಿಂದ ಕಾಲವನ್ನು ಸುಮ್ಮನೆ ಕಳೆದುಕೊಳ್ಳದೆ ಅದನ್ನು ಬೆಲೆಯುಳ್ಳದ್ದೆಂದು ಉಪಯೋಗಿಸಿಕೊಳ್ಳಿರಿ.** (ಎಫೆಸದವರಿಗೆ 5:15,16).

ಎಫೆಸದವರಿಗೆ ಬರೆದ ಪತ್ರಿಕೆಯಲ್ಲಿ ''ಕಾಲವನ್ನು ಸುಮ್ಮನೆ ಕಳೆದುಕೊಳ್ಳದೆ'' ನಡೆಯಬೇಕೆಂದು ಹೇಳುತ್ತದೆ. ದೊರೆಯುವಂತಹ ಪ್ರತಿ ನಿಮಿಷವನ್ನು ಉಪಯೋಗಿಸಿಕೊಳ್ಳಬೇಕು ಮತ್ತು ಒಳ್ಳೆಯದಾದ ರೀತಿಯಲ್ಲಿ ಇದನ್ನು ಉಪಯೋಗಿಸಬೇಕೆಂದು ಸಹ ತಿಳಿಸುತ್ತದೆ. ಸಮಯವು ಬೆಲೆಯುಳ್ಳದ್ದಾಗಿದೆ ಮತ್ತು

ನಮ್ಮೆಲ್ಲರಿಗೂ ಇದು ಬಹಳ ಪ್ರಾಮುಖ್ಯವಾದದ್ದು. ನಮ್ಮ ಸಭೆಯಲ್ಲಿ, ನಮ್ಮ ಸಿಬ್ಬಂದಿಗಳು ಪ್ರತಿವಾರ ಸುಮಾರು 40 (ನಲವತ್ತು) ಗಂಟೆ ಕೆಲಸ ಮಾಡುವುದು ಅವಶ್ಯವಾಗಿದೆ. ನಿಮ್ಮ ಸಭಾಪಾಲಕರು ಮತ್ತು ಸಭಾ ಸಿಬ್ಬಂದಿಗಳ ಸಮಯ ಕಾಪಾಡುವುದರಿಂದ ನೀವು ಅವರಿಗೆ ಸಹಾಯ ಮಾಡಬಹುದು.

- ದಯವಿಟ್ಟು ಸಭಾಪಾಲಕರನ್ನು ನಿಯಮಿತ ಕಛೇರಿಯ ಗಂಟೆಗಳ ಅವಧಿಯಲ್ಲಿ ಸಂದರ್ಶಿಸಿರಿ, ಸಭಾಪಾಲಕರು ತಮ್ಮ ಕಛೇರಿಯಲ್ಲಿ ಬೆಳಿಗ್ಗೆ 8:30 ರಿಂದ ಸಂಜೆ 6:30 ವರೆಗೆ ಇರವುದಾದರೆ, ನಿಮ್ಮ ಅನುಕೂಲಕರವಾದ ಎಲ್ಲಾ ಕೆಲಸ ಮುಗಿಸಿಕೊಂಡು ಸಂಜೆ 7:30ಕ್ಕೆ ಭೇಟಿ ಮಾಡುತ್ತೇನೆಂದು ಅವರನ್ನು ಕಛೇರಿಯಲ್ಲಿ ಉಳಿದುಕೊಳ್ಳಲು ವಿನಂತಿಸಿಕೊಳ್ಳಬೇಡಿರಿ. ಕೆಲವು ಸಮಯಗಳಲ್ಲಿ ಸಭಾಪಾಲಕರು  ಉಳಿದುಕೊಂಡು ಜನರನ್ನು ಭೇಟಿ ಮಾಡಬಹುದು ಆದರೆ ಅವರಿಗೂ ಸಹ ಕುಟುಂಬಗಳಿವೆ. ಅವರು ಹಿಂತಿರುಗಿ ಹೋಗಬೇಕು ಎಂಬುದಾಗಿ ದಯವಿಟ್ಟು ಮನದಟ್ಟು ಮಾಡಿಕೊಳ್ಳಿರಿ. ನೀವು ವೈದ್ಯರನ್ನು ಸಂದರ್ಶಿಸಬೇಕಾದರೆ ವೈದ್ಯರಿಂದ ಕೊಡಲ್ಪಟ್ಟ ನೇಮಿಸಲ್ಪಟ್ಟ ಸಮಯಕ್ಕೆ ಸಾಮಾನ್ಯವಾಗಿ ಬದ್ಧರಾಗಿರುತ್ತೀರಿ, ಮತ್ತು ಅವರನ್ನು ಸಂದರ್ಶಿಸಲು ದಿನದ ರಜೆ ಪಡೆದು ಹೋಗುತ್ತೀರಿ, ಈ ರೀತಿಯಲ್ಲಿಯೇ ಯೋಚಿಸಿ ನಿಮ್ಮ ಸಭಾಪಾಲಕರನ್ನು ಸತ್ಕರಿಸಿರಿ. ನಿಮಗೆ ಆತ್ಮಿಕವಾದ ಅಗತ್ಯತೆಗಳಿದ್ದರೆ ಮತ್ತು ನಿಮ್ಮ ಸಭಾಪಾಲಕರನ್ನು ಭೇಟಿ ಮಾಡಲು ಬಹಳ ಗಂಭೀರ ಸ್ಥಿತಿ ಎದುರಾದರೆ, ನೀವು ದಿನದ ರಜೆ ಪಡೆದು ಅಥವಾ ಅಗತ್ಯವಾದ ಹೊಂದಾಣಿಕೆ ಮಾಡುವುದರ ಮೂಲಕ ನಿಮ್ಮ ಸಭಾಪಾಲಕರು ಕಾಯದಂತೆ ನೋಡಿಕೊಳ್ಳಬಹುದು.
- ನಿಮ್ಮ ಸೇವೆಯ ಕುರಿತು ನಿಮಗೆ ಒಂದು ಕಲ್ಪನೆ ಅಥವಾ ಊಹೆ ಇದ್ದರೆ ನಿಮ್ಮ ಸಭಾಪಾಲಕರು ಅದನ್ನು ನೆಡೆಸುವಂತೆ ಕೇಳಿಕೊಳ್ಳಬೇಡಿರಿ. ನಿಮ್ಮ ಸಭಾಪಾಲಕರು ವಿಚಾರ ಮತ್ತು ಸಲಹೆಗಳಿಗೆ ತೆರೆದವರಾಗಿರಬಹುದು ಆದರೆ ನೀವು ಸೇವೆಯಲ್ಲಿ ಕಲ್ಪನೆಗಳನ್ನು ಆಚರಣೆಗೆ ತರಬೇಕೆಂದು ಬಯಸಬೇಡಿರಿ, ಹಲವು ಬಾರಿ ಜನರು ಸಭಾಪಾಲಕರ ಬಳಿ ತಮ್ಮ ಕಲ್ಪನೆಗಳಿಂದ ಬರುತ್ತಾರೆ ಮತ್ತು ಅಂತಹ ನಿರ್ದಿಷ್ಟ ಸೇವೆಯನ್ನು ಸಭಾಪಾಲಕರು ಪ್ರಾರಂಭಿಸುವಂತೆ ದೇವರು ನೆಡೆಸುತ್ತಿದ್ದಾನೆ ಎಂಬುದಾಗಿ ಪಟ್ಟುಹಿಡಿಯುತ್ತಾರೆ. ನಿಮಗೆ ಅಂತಹ ಪ್ರಬಲವಾದ ಹುರಿದುಂಬಿಸುವಿಕೆ ಹೃದಯದಲ್ಲಿದ್ದರೆ ಮತ್ತು ಯಾವುದಾದರೊಂದನ್ನು ಪ್ರಾರಂಭಿಸಬೇಕೆಂದು ದೇವರು ಖಚಿತವಾಗಿ ಹೇಳಿದರೆ ನಿಮ್ಮ ಸಭಾಪಾಲಕರ

ಅನುಮತಿ ಪಡೆದು ನೀವು ಅದನ್ನು ಮಾಡಲು ಮೊದಲ ಹೆಜ್ಜೆಯಿಡಬೇಕು ಅಥವಾ ಅದನ್ನು ಪ್ರಾರಂಭಿಸಬೇಕು.

- ನಿಮ್ಮ ಸಭಾಪಾಲಕರಿಗೆ ಪುಸ್ತಕದ ಪರಿಶೀಲನೆ (ಸಮೀಕ್ಷೆ) ಮಾಡಿಕೊಡಿರಿ ಎಂಬುದಾಗಿ ದಯವಿಟ್ಟು ಕೇಳಬೇಡಿರಿ, ಅವರ ಮನೆಯಲ್ಲಿ ಓದದೇ ಇರುವ ಅನೇಕ ಪುಸ್ತಕಗಳಿರಬಹುದು ಯಾಕೆಂದರೆ ಅವುಗಳನ್ನು ಓದಲು ಸಮಯವಿಲ್ಲದಿರಬಹುದು, ಎಂಬುದು ನಿಮ್ಮೆಲ್ಲರಿಗೂ ಗೊತ್ತಿರುವ ವಿಚಾರವಾಗಿದೆ!

- ದಯವಿಟ್ಟು ನಿಮ್ಮ ಸಭಾಪಾಲಕರಿಗೆ ಇತರ ವ್ಯವಹಾರಗಳನ್ನು ಮಾಡುವಂತೆ ಕೇಳಿಕೊಳ್ಳಬೇಡಿರಿ. ಉದಾಹರಣೆಗೆ ವಧು-ವರರ ಅನ್ವೇಷಣೆ ಮಾಡಲು, ರಿಯಲ್ ಎಸ್ಟೇಟ್ಸ್, ಮುಂತಾದವುಗಳು. ನೀವು ಸ್ಥಳವನ್ನು ಪುನ: ಬದಲಾವಣೆ ಮಾಡುತ್ತಿದ್ದರೆ, ಸ್ಥಳೀಯ ಸಭೆಯ ಸಭಾಪಾಲಕರಿಗೆ ನಿಮಗಾಗಿ ಸ್ಥಳ ಹುಡುಕಿಕೊಡಲು ಸಹಾಯ ಮಾಡಲು ಕೇಳಿ ಬರೆಯಬೇಡಿರಿ. ಸಭಾಪಾಲಕರು ಸೇವೆ ಮಾಡಲು ಇರುವುದು. ಆದಾಗ್ಯೂ ನೀವು ಉಳಿದುಕೊಳ್ಳಲು ವಸತಿ ಗುರ್ತಿಸಿಕೊಡಲು ನಿರೀಕ್ಷಿಸುವುದು ಅಷ್ಟು ಉತ್ತಮವಾದುದ್ದಲ್ಲ. ನಿಮಗೆ ಸರಿಹೊಂದುವ ಬಾಳಸಂಗಾತಿಯನ್ನು ಹುಡುಕಿಕೊಡುವಂತೆ ನಿಮ್ಮ ಸಭಾಪಾಲಕರಿಗೆ ಒತ್ತಾಯ ಮಾಡದಿರಿ. ಸಭಾಪಾಲಕರು ಯೋಚಿಸುವ ಸರಿಹೊಂದುವವರು ಯಾರಾದರೂ ಇದ್ದರೆ ಅವರೇ ಆ ವ್ಯಕ್ತಿಯ ಬಗ್ಗೆ ಸಲಹೆ ನೀಡುತ್ತಾರೆ ಆದರೆ ಸಭಾಪಾಲಕರ ಮೇಲೆ ಒತ್ತಾಯವನ್ನು ಹೇರಬೇಡಿರಿ.

## ನಿಮ್ಮ ಸಭಾಪಾಲಕರ ಕುಟುಂಬವನ್ನು ಕಾಪಾಡಲು ಸಹಾಯ ಮಾಡಿರಿ

**ಆಗ ಯೇಸು, ಅವರಿಗೆ ನೀವೆಲ್ಲರೂ ಈ ರಾತ್ರಿ ನನ್ನ ವಿಷಯದಲ್ಲಿ ದಿಗಿಲುಪಟ್ಟು ಹಿಂಜರಿಯುವಿರಿ. ಕುರುಬನನ್ನು ಹೊಡೆಯುವೆನು. ಹಿಂಡಿನ ಕುರಿಗಳು ಚದರಿಹೋಗುವವು ಎಂದು ಬರೆದದೆಯಲ್ಲಾ.** (ಮತ್ತಾಯ 26:1 ಜೆಕರ್ಯ 13:7 ರಿಂದ ಉಲ್ಲೇಖಿಸಲ್ಪಟ್ಟಿದ್ದು).

- ವೈರಿಯು ಕುರುಬನನ್ನು ಹೊಡೆದರೆ, ಕುರಿಗಳನ್ನು ಚದುರಿಸಬಹುದು ಅನೇಕ ಜನರ ಸೇವೆಯು ಬಹಳ ''ಆಕರ್ಷಕ''ವಾದುದೆಂದು ಯೋಚಿಸುತ್ತಾರೆ ಯಾಕೆಂದರೆ ಪ್ರತಿ ಭಾನುವಾರ ಸಭಾ ಪಾಲಕರು ಐವತ್ತು ನಿಮಿಷಗಳು ಪ್ರಸಂಗ ಮಾಡುತ್ತಾರೆ ಮತ್ತು ಸಭಿಕರು ಅವರ ಸಂದೇಶ ಕೇಳುತ್ತಾರೆ. ಅವರು ಅನೇಕ ಪುಸ್ತಕಗಳನ್ನು ಬರೆದು ಗ್ರಂಥಕರ್ತರಾಗುವರು. ಅವರ ಸಂದೇಶಗಳ ಸಿ.ಡಿ.

ಮತ್ತು ಟೇಪ್‌ಗಳನ್ನು ಮಾಡಬಹುದು. ಸೇವೆಯಲ್ಲಿ ಮುಂದೆ ನಿಂತು ನಿಮ್ಮನ್ನು ನಡಿಸುವ ದೇವರ ಸೇವಕರು ಸೈತಾನನ ಉಗ್ರ ಆಕ್ರಮಣಕ್ಕೆ ಪ್ರಧಾನ ಗುರಿಯಾಗುತ್ತಾರೆ ಎಂದು ತಿಳಿಯಿರಿ. ಕುರುಬನನ್ನು ಹೊಡೆಯುವುದು ಮತ್ತು ಕುರಿಗಳನ್ನು ನಾಶ ಪಡಿಸುವುದು ಸೈತಾನನ ಆಶಯವಾಗಿರುತ್ತದೆ. ಸಾಮಾನ್ಯ ವಿಶ್ವಾಸಿಗಳಿಗಿಂತ ಸಭಾಪಾಲಕರು ಮತ್ತು ದೇವರ ಸುವಾರ್ತಾ ಸೇವಕರು ಅಧಿಕವಾಗಿ ಉಗ್ರ ಹೋರಾಟಗಳನ್ನು ಹಾದು ಹೋಗಬೇಕಾಗಿರುತ್ತದೆ. ಆದುದರಿಂದ ನಿಮಗಾಗಿ ಸೇವೆ ಮಾಡುತ್ತಿರುವ ನಿಮ್ಮ ಸಭಾಪಾಲಕರು ಮತ್ತು ಸುವಾರ್ತಾ ಸೇವಕರಿಗಾಗಿ ಮತ್ತು ಅವರ ಕುಟುಂಬಗಳಿಗಾಗಿ ಎಡೆಬಿಡದೆ ನೀವು ಪ್ರಾರ್ಥನೆ ಮಾಡುವುದು ನೀವು ಅವರಿಗೆ ಕೊಡುವಂತಹ ದೊಡ್ಡ ಬಹುಮಾನವಾಗಿದೆ ಮತ್ತು ಅವರಿಗೆ ನಿಮ್ಮ ಪ್ರಾರ್ಥನೆಯ ಅವಶ್ಯಕತೆಯಿದೆ. ಅವರ ಸುತ್ತಲೂ ಕಾಯುವವರಾಗಿ ನಿಂತಿರುತ್ತೀರಿ. ನಿಮ್ಮ ಪ್ರಾರ್ಥನೆಗಳ ಮೂಲಕ ಅವರ ಸುತ್ತಲೂ ಗುರಾಣಿಯನ್ನು ಹಾಕಿರಿ ಸೈತಾನನಿಗೆ ''ನನ್ನ ಸಭಾಪಾಲಕರ ಮೇಲೆ ಬಾಣವನ್ನು ಬಿಡಬೇಕಾದರೆ ನಾನು ಇಲ್ಲಿ ನಿಂತಿದ್ದೇನೆ. ಮೊದಲು ನನ್ನನ್ನು ದಾಟಿ ಹೋಗಬೇಕಾಗಿದೆ'' ಎಂಬುದಾಗಿ ಹೇಳಿರಿ ಸಭಾಪಾಲಕರಿಗೆ, ಮತ್ತು ಸಭಾ ಸೇವೆ ಮಾಡುತ್ತಿರುವ ಸುವಾರ್ತಾ ಸೇವಕರಿಗಾಗಿ ಮತ್ತು ಅವರ ಕುಟುಂಬಗಳಿಗಾಗಿ ಇಡೀ ಸಭೆಯವರು ಪ್ರಾರ್ಥಿಸುತ್ತಿದ್ದರೆ ಅಲ್ಲಿ ಬಲಿಷ್ಟವಾದ ಸಭೆಯಿರುತ್ತದೆ ಯಾಕೆಂದರೆ ನಾಯಕರು ಜಾಗರೂಕವಾಗಿ ಸಂರಕ್ಷಿಸಲ್ಪಡುತ್ತಾರೆ ಮತ್ತು ಕುರುಬರನ್ನು ಹೊಡೆಯಲು ಸೈತಾನನು ಏನು ಮಾಡಿದರೂ ಸಾಧ್ಯವಾಗುವುದಿಲ್ಲ.

## ಪ್ರತಿನಿಧಿಸುವ ನಾಯಕತ್ವವನ್ನು ಗೌರವಿಸುವುದು ಮತ್ತು ಕೆಲಸಮಾಡುವುದು

- ನಿಮ್ಮ ಸಭಾಪಾಲಕರು ಎಲ್ಲವನ್ನೂ ಮಾಡಲು ಸಾಧ್ಯವಿಲ್ಲ. ಆದ್ದರಿಂದ ವಿವಿಧ ಸಭಾಸೇವೆಗಳ ಜವಾಬ್ದಾರಿಯನ್ನು ಇತರ ಅನೇಕ ನಾಯಕರು ಪ್ರತಿನಿಧಿಸುವರು. ಅಂತಹ ನಾಯಕರನ್ನು ಗೌರವಿಸುವುದು, ಅವರೊಂದಿಗೆ ಸಹಕರಿಸುವುದು ಮತ್ತು ಅವರೊಂದಿಗೆ ಕೆಲಸ ಮಾಡುವುದು ಬಹಳ ಉತ್ತಮ ವಿಷಯವಾಗಿದೆ. ಸಭೆಯಲ್ಲಿ ಇರುವ ಪ್ರತಿನಿಧಿಸುವಂತಹ ನಾಯಕತ್ವವನ್ನು ನೀವು ಗೌರವಿಸಿದರೆ ನೀವು ನಿಮ್ಮ ಸಭಾಪಾಲಕರಿಗೆ ಸಹಾಯ ಮಾಡುವವರಾಗಿರುವಿರಿ. ಉದಾಹರಣೆಗೆ, ಸದಸ್ಯರ ಬಗ್ಗೆ ಕಾಳಜಿವಹಿಸುವ ಸಭಾಪಾಲಕರು, ಮಕ್ಕಳ ಸಭೆಯ ಸಭಾಪಾಲಕರು, ಗುಂಪುಗಳ ಸಭಾಪಾಲಕರು, ಯೌವನಸ್ಥರ ಸಭಾಪಾಲಕರು ಆರಾಧನಾ ತಂಡದ

ನಾಯಕರು ಮುಂತಾದವರು ಇರುತ್ತಾರೆ. ನಿಮಗೆ ಹಲವು ಕಾಳಜಿಗಳಿದ್ದರೆ, ಅವುಗಳನ್ನು ಸಂಬೋಧಿಸುವ ಅಗತ್ಯವಿದ್ದರೆ, ಆ ಕ್ಷೇತ್ರದಲ್ಲಿ ಸೇವೆ ಮಾಡುವ ನಾಯಕರನ್ನು ಕಡೆಗಣಿಸದಿರಿ ಮತ್ತು ನೇರವಾಗಿ ನಿಮ್ಮ ಸಭಾಪಾಲಕರನ್ನು ಸಂಪರ್ಕಿಸಲು ಪ್ರಯತ್ನಿಸದಿರಿ. ವಿವಿಧ ಸೇವೆಗಳಿಗಾಗಿ ನೇಮಕಗೊಂಡ ನಾಯಕರನ್ನು ಗೌರವಿಸಿರಿ. ವಿವಾದಾಂಶಗಳನ್ನು ಅವರಿಗೆ ನೇರವಾಗಿ ತನ್ನಿರಿ ಮತ್ತು ಅವರೇ ಅದನ್ನು ನಿಭಾಯಿಸುವಂತೆ ಅವಕಾಶ ನೀಡಿರಿ. ನಿರ್ದಿಷ್ಟ ಸೇವೆಯ ನಾಯಕರು ಅನುಭವಗಳನ್ನು ಹೊಂದಿಲ್ಲ ಎಂಬುದಾಗಿ ಆಲೋಚಿಸಬೇಡಿರಿ. ತೊಂದರೆಗಳನ್ನು ಬಗೆಹರಿಸಲು ಅವಕಾಶಗಳನ್ನು ನೀವು ನೀಡದಿರುವಾಗ ಅವರಿಗೆ ಅವಶ್ಯವಾಗಿರುವ ಬಹಳ ಅನುಭವಗಳನ್ನು ನೀವು ಕದ್ದುಕೊಂಡಂತೆ ಆಗುತ್ತದೆ. ಸಭಾಪಾಲಕರು ಸೇವಾ ನಾಯಕರ ಮೇಲೆ ಸಂಪೂರ್ಣ ಭರವಸೆ ಹೊಂದಿರುತ್ತಾರೆ ಮತ್ತು ನಿಮ್ಮನ್ನು ಕೇಳುವುದಕ್ಕಿಂತ ಮೊದಲು ಅವರನ್ನು ಕೇಳುತ್ತಾರೆಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು.

**ಚೆನ್ನಾಗಿ ಅಧಿಕಾರ ನೆಡೆಸುವ ಸಭೆಯ ಹಿರಿಯರನ್ನು ಅವರೊಳಗೆ ವಿಶೇಷವಾಗಿ ಪ್ರಸಂಗದಲ್ಲಿಯೂ ಉಪದೇಶದಲ್ಲಿಯೂ ಕಷ್ಟಪಡುವವರನ್ನು ಇಮ್ಮಡಿಯಾದ ಮಾನಕ್ಕೆ ಯೋಗ್ಯರೆಂದು ಎಣಿಸಬೇಕು. ಕಣ ತುಳಿಯುವ ಎತ್ತಿನ ಬಾಯಿ ಕಟ್ಟಬಾರದೆಂತಲೂ ಆಳು ತನ್ನ ಕೂಲಿಗೆ ಯೋಗ್ಯನಾಗಿದ್ದಾನೆಂತಲೂ ಶಾಸ್ತ್ರದಲ್ಲಿ ಹೇಳಿದೆಯಲ್ಲಾ. ಸಭೆಯ ಹಿರಿಯನ ಮೇಲೆ ಯಾರಾದರೂ ದೂರು ಹೇಳಿದರೆ ಇಬ್ಬರು ಮೂವರ ಸಾಕ್ಷಿಗಳಿದ್ದ ಹೊರತಾಗಿ ಅದನ್ನು ಮನಸ್ಸಿಗೆ ತೆಗೆದುಕೊಳ್ಳಬೇಡ.** (1 ತಿಮೊಥೆಯನಿಗೆ 5:17-19)

## ಸಭೆಯ ದರ್ಶನ ಮತ್ತು ಕರೆಯೊಡನೆ ಜೊತೆಗೂಡಿ ಮುಂದುವರೆಯಿರಿ

**ಗೊತ್ತು ಮಾಡಿಕೊಳ್ಳದೆ ಇಬ್ಬರು ಜೊತೆಯಾಗಿ ನಡೆಯುವರೋ?** (ಆಮೋಸ 3:3)

**ಒಂದು ಮನೆಯಲ್ಲಿ ಭೇದಹುಟ್ಟಿದರೆ ಆ ಮನೆಯು ನಿಲ್ಲಲಾರದು** (ಮಾರ್ಕ 3:25)

- ಸ್ಥಳೀಯ ಸಭೆಗಳ ಭಾಗಗಳಾಗಿರುವ ಪ್ರತಿಯೊಬ್ಬರು ಸಭೆಯು ಹೊಂದಿರುವ ದರ್ಶನ ಮತ್ತು ಕರೆಗೆ ಹೊಂದಿಕೊಂಡು ನಡೆಯಬೇಕು ಪ್ರತಿಯೊಂದು ಸ್ಥಳೀಯ ಸಭೆಯ ನಿರ್ಧಿಷ್ಟ ಕರೆ ಹೊಂದಿರುತ್ತವೆ. ಮತ್ತು ಪ್ರತಿ ಸದಸ್ಯರು ಅದರ ಕರೆಯೊಂದಿಗೆ ಜೊತೆಗೂಡಬೇಕು. ಉದಾರಣೆಗೆ, ಸ್ಥಳೀಯ ಸಭೆಯ ದರ್ಶನವು ಸಣ್ಣ ಅನ್ಯೋನ್ಯತೆ ಸಭೆಯ (ಸೆಲ್ ಚರ್ಚ್) ಕುರಿತದ್ದಾಗಿದ್ದರೆ ಸಭೆಯ ಸದಸ್ಯರು ತಮಗೆ ಇಷ್ಟವಿಲ್ಲವೆಂದು ಮತ್ತು ನಾವು ಯಾವುದೇ ಸಣ್ಣ ಅನ್ಯೋನ್ಯತೆ

ಸಭೆಯ ಭಾಗವಾಗಿ ಇರುವುದಿಲ್ಲವೆಂದು ಹೇಳಲು ಆಗುವುದಿಲ್ಲ. ಇದನ್ನು ಸಭೆಯು ಸಂಯೋಜಿತವಾಗಿ ಮಾಡುತ್ತಿರುವುದಾಗಿ ಮತ್ತು ಪ್ರತಿಯೊಬ್ಬರು ಸಹ ಇದರಲ್ಲಿ ನಿರತರಾಗಿರಬೇಕು.

- ದೇವರು ಸಭೆಗಿರುವ ಆತನ ಯೋಜನೆಗಳನ್ನು ವಿಸ್ತರಿಸುವಾಗ, ಅವರು ಮಾಡಬೇಕೆಂಬುದಾಗಿ ಆತನು ಬಯಸುವ ಹೊಸ ವಿಷಯಗಳಿಗೆ ಆತನೇ ಜನ್ಮ ನೀಡುತ್ತಾನೆ. ಆದ್ದರಿಂದ ಸಭಾಪಾಲಕರಿಗೆ ಮತ್ತು ಸಭಾನಾಯಕರಿಗೆ ಬೆಂಬಲ ನೀಡುವವರಾಗಬೇಕು ದೇವರು ಸಭೆಯನ್ನು ಹೊಸ ವಿಷಯಗಳ ಮತ್ತು ಬದಲಾವಣೆಗಳ ಕಡೆಗೆ ನಡೆಸಿದರೆ ಅದಕ್ಕೆ ಅಡ್ಡಿಯನ್ನುಂಟುಮಾಡಬೇಡಿರಿ ದೇಹದೊಡನೆ ಜೊತೆಗೂಡಿ ಮುಂದೆ ಸಾಗಿರಿ ನಾಯಕರನ್ನು ಹಿಂಬಾಲಿಸುತ್ತಾ ಅದೇ ದಿಕ್ಕಿನಲ್ಲಿ ನಡೆಯುವವನಾಗಿರಿ.
- ನೀವು ಒಂದು ಸಭೆಯನ್ನು ಸಂದರ್ಶಿಸುವಾಗ, ಆ ನಿರ್ಧಿಷ್ಟ ಸಭೆಯು ಹೇಗಿರಬೇಕೆಂಬುದಾಗಿ ಪೂರ್ವಾಗ್ರಹ ವಿಚಾರಗಳನ್ನು ನೀವು ಹೊಂದಿರಬಹುದು. ಅಂತಹ ವಿಚಾರಗಳು, ಆ ಸಭೆಯ ದರ್ಶನಗಳೊಂದಿಗೆ ಜೊತೆಗೂಡಲು ನಿಮಗೆ ಅಡ್ಡಿತರಬಹುದು. ಆದ್ದರಿಂದ ನಿಮ್ಮ ವೈಯಕ್ತಿಕ ಕಾರ್ಯಸೂಚಿಪತ್ರ (ಅಜೆಂಡಾ)ವನ್ನು ಬದಿಗಿಟ್ಟು ಸಭೆಯ ಶೀರ್ಷಿಕೆಗಳೊಡನೆ ಜೊತೆಗೂಡಿ ಮುಂದುವರೆಯಿರಿ.
- ದಯವಿಟ್ಟು ಒಂದು ಸಭೆಗೆ ಆನಂದಕ್ಕಾಗಿ (ಸಂತೋಷಕ್ಕಾಗಿ) ಹೋಗಬೇಡಿರಿ. ನೀವು ಏನನ್ನಾದರೂ ಪಡೆಯುವ ಮತ್ತು ಸಂತೋಷವಾಗಿರುವವರೆಗೆ ಸಭೆಗೆ ಹೋಗುವವರಂತೆ ನೀವಾಗದಿರಿ. ಸಭೆಯು ನಿಮ್ಮನ್ನು ಸಂತೋಷಪಡಿಸದ ದಿನವೇ, ನೀವು ಬಿಟ್ಟುಬಿಡಬೇಕೆಂಬುದಾಗಿ ತಿರ್ಮಾನಿಸುವ ಮತ್ತು ಬೇರೆ ಎಲ್ಲಿಯಾದರೂ ಹೋಗುವ ದಿವಸವಾಗಲಾರದು. ನಿಮಗೆ ಏನು ಸಿಗುತ್ತದೆಂದು ಎದುರು ನೋಡಬೇಡಿರಿ ಅತ್ಯಧಿಕವಾಗಿಲ್ಲದಿದ್ದರೂ ನೀವು ಹೊಂದುವಷ್ಟು ಹಿಂದೆ ಕೊಡುವವರಾಗಿರಿ. ಪಡೆಯುವುದಕ್ಕಿಂತ ಕೊಡುವುದರಲ್ಲಿ ಅತ್ಯಧಿಕವಾದ ಆಶೀರ್ವಾದವಿದೆ ಎಂಬುದಾಗಿ ಯೇಸುವು ಹೇಳಿದ್ದಾನೆ (ಅಪೊಸ್ತಲರ ಕೃತ್ಯಗಳು 20:35). ಸಭೆಯಿಂದ ನೀವು ಖಂಡಿತವಾಗಿ ಜ್ಞಾನವನ್ನು ಮತ್ತು ತಿಳುವಳಿಕೆಯನ್ನು ಪಡೆದುಕೊಳ್ಳುವಿರಿ. ನೀವು ಪ್ರೌಢರಾಗಿರುವಿರಿ ಮತ್ತು ನೀವು ಕ್ರಿಸ್ತನಲ್ಲಿ ಸಂಪೂರ್ಣವಾಗಿ ಬೆಳವಣಿಗೆ ಹೊಂದಿದ ಸ್ಥಳಕ್ಕೆ ಬರುವವರಾಗುವಿರಿ.

## ಸಭೆಯ ನಂಬಿಕೆ ಮತ್ತು ಬೋಧನೆಗಳೊಂದಿಗೆ ಜೊತೆಗೂಡಿ ಮುಂದುವರಿಯಿರಿ

**ಸಹೋದರರೇ, ನಿಮ್ಮೆಲ್ಲರ ಮಾತು ಒಂದೇ ಆಗಿರಬೇಕು: ನಿಮ್ಮಲ್ಲಿ ಭೇದಗಳಿರಬಾರದು, ನೀವು ಒಂದೇ ಮನಸ್ಸೂ ಒಂದೇ ಅಭಿಪ್ರಾಯವೂ ಉಳ್ಳವರಾಗಿದ್ದು ಹೊಂದಿಕೆಯಿಂದಿರಬೇಕು ಎಂಬುದಾಗಿ ನಾನು ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ನಿಮ್ಮನ್ನು ಬೇಡಿಕೊಳ್ಳುತ್ತೇನೆ.** (1ಕೊರಿಂಥದವರಿಗೆ 1:10).

- ಒಂದು ಸಭೆಯ ನಂಬಿಕೆ ಮತ್ತು ಬೊಧನೆಗಳು ಸಭೆಯು ಸ್ಥಾಪನೆಯಾಗುವ ಮೊದಲೇ ಸಾಮಾನ್ಯವಾಗಿ ''ನಂಬಿಕೆಯ ಹೇಳಿಕೆ''ಗಳಲ್ಲಿ ಬರೆಯಲ್ಪಟ್ಟು ವ್ಯಕ್ತಪಡಿಸಿರುತ್ತವೆ.
- ಸಭೆಯ ನಂಬಿಕೆಯ ಹೇಳಿಕೆಯು (ವ್ಯವಹರಿಸಲಾಗದಂತಹದ್ದು) ಬದಲಿಸಲಾಗದ್ದು ಮತ್ತು ಚರ್ಚೆಗಳಿಗೆ ಆಸ್ಪದವಿಲ್ಲದ್ದು.
- ಸಭೆಯ ಅಂಗವಾಗಿ ಸೇರಿಕೊಳ್ಳಲು ತೀರ್ಮಾನ ಮಾಡುವ ಮೊದಲು ಸಭೆಯ ಬೋಧನೆಗಳು ಮತ್ತು ನಂಬಿಕೆಯನ್ನು ದಯಮಾಡಿ ಓದಿ ಅರ್ಥಮಾಡಿಕೊಳ್ಳಿರಿ.
- ನೀವು ಒಂದು ಸ್ಥಳೀಯ ಸಭೆಯ ಭಾಗವಾದ ಮೇಲೆ, ನಂಬಿಕೆಯ ಹೇಳಿಕೆಯನ್ನು ಬದಲಾಯಿಸಲು ಯಾವುದೇ ಪ್ರಯತ್ನಗಳನ್ನು ಮಾಡಬೇಡಿರಿ ಸಭೆಯ ಬೋಧನೆಗಳು ಮತ್ತು ನಂಬಿಕೆಗೆ ನೀವು ಒಪ್ಪದಿದ್ದರೆ ನೀವು ಇದರಲ್ಲಿ ಯಾವುದಾದರೊಂದನ್ನು ಮಾಡಲು ಸ್ವತಂತ್ರವಾಗಿದ್ದೀರಿ. ಕಲಿಯುವುದು ಮತ್ತು ಸಭೆಯೊಂದಿಗೆ ಬೆಳೆಯುವುದು ಅಥವಾ ಬೇರೊಂದು ಸಭೆಯನ್ನು ಗುರ್ತಿಸಿಕೊಳ್ಳುವುದು. ನೀವು ಉಳಿದುಕೊಳ್ಳಲೇ ಬೇಕೆಂಬ ಬಲವಂತವಿಲ್ಲ.
- ಸಭೆಯ ವೈಯಕ್ತಿಕ ನಂಬಿಕೆ ಮತ್ತು ಬೊಧನೆಗೊಳೊಡನೆ ಒಪ್ಪಂದವಾಗದೆಯಿರುವ ನಿಮ್ಮ ವೈಯಕ್ತಿಕ ವಿಷಯಗಳನ್ನು ದಯವಿಟ್ಟು ನೀವೇ ಇಟ್ಟುಕೊಳ್ಳಿರಿ. ಉದಾಹರಣೆಗೆ ಸಭೆಯು ಸತ್ಯವೇದಕ್ಕನುಸಾರ ತತ್ವಗಳಾದ ಪವಿತ್ರಾತ್ಮನ ದೀಕ್ಷಾಸ್ನಾನ, ಅನ್ಯ ಭಾಷೆಯಲ್ಲಿ ಮಾತಾನಾಡುವುದು, ದೈವಿಕ ಸ್ವಸ್ಥತೆ ಮುಂತಾದವುಗಳೊಂದಿಗೆ ಒಪ್ಪಂದ (ಕರಾರು) ಮಾಡಿಕೊಂಡಿದ್ದರೆ ಸಭೆಯ ಸದಸ್ಯರು ಸಹ ಒಪ್ಪಂದದಲ್ಲಿ ಇರಬೇಕಾದುದು ನಿರೀಕ್ಷಿತವಾಗಿದೆ. ನಂಬಿಕೆಯೊಡನೆ ಮತ್ತು ಸಭೆಯ ಬೋಧನೆಯೊಡನೆ ನಿಮ್ಮ ವೈಯಕ್ತಿಕ ಮನವರಿಕೆ (ನಿಶ್ಚಿತಾಭಿಪ್ರಾಯ)ಗಳನ್ನು ಪ್ರವರ್ತಿಸಲು ಸಭೆಯನ್ನು ಉಪಯೋಗಿಸಿ ಮತ್ತು ಇತರ ಸಭಾನಾಯಕರುಗಳಿಗೆ, ನಂಬಿಕೆಯ ಹೇಳಿಕೆಗೆ

ವಿರುದ್ಧವಾದ ನಿಮ್ಮ ವಿಚಾರಾಭಿಪ್ರಾಯಗಳನ್ನು ಪತ್ರ, ಇ-ಮೇಲ್ ಮತ್ತು ಪುಸ್ತಕಗಳ ಮೂಲಕ ಬರೆದು ಕಳುಹಿಸಿ ಅವರನ್ನು ಪ್ರವರ್ತಿಸಲು ಪ್ರಯತ್ನಿಸಬೇಡಿರಿ.

## ಸಭಾಸೇವಕನಾಗು

**ಆತನು ಕೆಲವರನ್ನು ಅಪೊಸ್ತಲರನ್ನಾಗಿಯೂ ಕೆಲವರನ್ನು ಪ್ರವಾದಿಗಳನ್ನಾಗಿಯೂ, ಕೆಲವರನ್ನು ಸೌವಾರ್ತಿಕರನ್ನಾಗಿಯೂ, ಕೆಲವರನ್ನು ಸಭಾಪಾಲಕರನ್ನಾಗಿಯೂ, ಉಪದೇಶಿಗಳನ್ನಾಗಿಯೂ ಅನುಗ್ರಹಿಸಿದನು. ನಾವೆಲ್ಲರು ನಂಬಿಕೆಯಿಂದಲೂ ದೇವಕುಮಾರನ ವಿಷಯವಾದ ಜ್ಞಾನದಿಂದಲೂ ಉಂಟಾಗುವ ಐಕ್ಯವನ್ನು ಹೊಂದಿ ಪ್ರವೀಣತೆಗೆ ಬಂದವರಾಗಿ ಕ್ರಿಸ್ತನ ಪರಿಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟುವ ತನಕ ದೇವ ಜನರನ್ನು ಯೋಗ್ಯಸ್ಥಿತಿಗೆ ತರುವ ಕೆಲಸಕ್ಕೋಸ್ಕರವೂ ಸಭೆಯ ಸೇವೆಗೋಸ್ಕರವೂ ಕ್ರಿಸ್ತನ ದೇಹವು ಅಭಿವೃದ್ಧಿಯಾಗುವದಕ್ಕೋಸ್ಕರವೂ ಆತನು ಇವರನ್ನು ಅನುಗ್ರಹಿಸಿದನು.** (ಎಫೆಸದವರಿಗೆ 4:11-13).

- ಎಫೆಸದವರಿಗೆ ಬರೆದ ಪತ್ರಿಕೆ 4:11-13 ರ ವಚನಗಳು ಸೇವೆಯ ಕೆಲಸಗಳನ್ನು ಮಾಡಲು ಪ್ರತಿಯೊಬ್ಬ ಪವಿತ್ರರಾದವರನ್ನು ಸಿದ್ಧಗೊಳಿಸಲು ಐದು ವಿಧದ ಸೇವೆಯು ಕೊಡಲ್ಪಟ್ಟಿದೆ ಎಂಬುದಾಗಿ ಹೇಳುತ್ತದೆ. ಪ್ರತಿಯೊಬ್ಬ ವಿಶ್ವಾಸಿಯು ದೇವರ ಸಭಾ ಸೇವಕನಾಗಬೇಕೆಂದು ನೋಡುವುದು ಸಭಾಪಾಲಕರ ಆಶೆಯಾಗಿದೆ ಅಂತಹ ಹಂತ ತಲುಪಲು ಸ್ವಲ್ಪ ಸಮಯಬೇಕಾಗಬಹುದು ಆದರೆ ಸಭಾಪಾಲಕರು ಮತ್ತು ನಾಯಕರಾಗಿ ನೀವು ಅಂತಹ ಸ್ಥಿತಿ ತಲುಪಬೇಕೆಂದು ನಾವು ಬಯಸುತ್ತೇವೆ. ನೀವು ಯಾವುದಾದರೊಂದು ಕ್ಷೇತ್ರದಲ್ಲಿ ದೇವರ ಸೇವೆ ಮಾಡುವುದನ್ನು ಪ್ರಾರಂಭಿಸುವ ಸ್ಥಳಕ್ಕೆ ಬರಬೇಕೆಂಬುದಾಗಿ ನಾವು ಬಯಸುತ್ತೇವೆ. ನಿಮ್ಮಲ್ಲಿ ಪ್ರತಿಯೊಬ್ಬರಿಗೂ ವರಗಳು ತಲಾಂತುಗಳು ಮತ್ತು ಸಾಮರ್ಥ್ಯ ಅಥವಾ ಯೋಗ್ಯತೆಗಳು ಕೊಡಲ್ಪಟ್ಟಿದೆ. ದೇವರು ನಿಮ್ಮಲ್ಲಿ ಇಟ್ಟಿರುವ ದ್ರವ್ಯವು ಇದೆ. ಆತನು ವಿಷಯಗಳನ್ನು ನಿಮ್ಮಲ್ಲಿ ತೊಡಗಿಸಿದ್ದಾನೆ ಅವುಗಳನ್ನು ನೀವು ಆತನ ರಾಜ್ಯಕ್ಕಾಗಿ ಉಪಯೋಗಿಸಬೇಕೆಂದು ಆತನು ಅಪೇಕ್ಷಿಸಿಸುತ್ತಾನೆ. ದೇವರ ಸೇವೆಯನ್ನು ಮಾಡಿರಿ ಮತ್ತು ದೇವರ ಸಭಾ ಸೇವಕರಾಗಿರಿ. ನೀವು ಸ್ವಲ್ಪ ಹೊತ್ತು ಆಲಯದಲ್ಲಿನ ಆಸನದಲ್ಲಿ ಕುಳಿತು ಕೊಳ್ಳುವುದು ಪರವಾಗಿಲ್ಲ ಆದರೆ ಆ ಆಸನವು ಬಿಸಿಯಾದಾಗ ದಯವಿಟ್ಟು ಅದರೊಳಗಿಂದ ಹೊರ ಹಾರಿಬಿಡಿರಿ!
- ಕ್ರಿಸ್ತನ ದೇಹದಲ್ಲಿರುವ ನಿಮಗೆ ದೇವರು ಒಂದು ನಿರ್ದಿಷ್ಟ ಸ್ಥಳವನ್ನು ಇರಿಸಿದ್ದಾನೆ. ನಿಮ್ಮ ಸ್ಥಳವನ್ನು ಗುರ್ತಿಸಿರಿ ಮತ್ತು ದೇಹದಲ್ಲಿ ನಿಮ್ಮ ದೇವರ ನೇಮಿತ ಕಾರ್ಯಗಳನ್ನು ಪಾಲಿಸಿರಿ ನೀವು ಸಭೆಯ ಒಬ್ಬ ಸಾಮಾನ್ಯ ಸದಸ್ಯರಲ್ಲ,

ನೀವು ದೇವರ ಸಭಾಸೇವಕರಾಗಿದ್ದೀರಿ ಕ್ರಿಸ್ತ ದೇಹದಲ್ಲಿ ಕೆಲಸಮಾಡಲು ಪ್ರಾರಂಭಿಸಿರಿ.

**ಆದರೆ ದೇವರು ಆ ಅಂಗಗಳಲ್ಲಿ ಪ್ರತಿಯೊಂದನ್ನು ತನಗೆ ಸರಿಯಾಗಿ ತೋಚಿದ ಪ್ರಕಾರ ದೇಹದೊಳಗೆ ಇಟ್ಟಿದ್ದಾನೆ.** (1 ಕೊರಿಂಥದವರಿಗೆ 12:18)

ನೀವು ಸೇವೆ ಮಾಡಲು ಪ್ರಾರಂಭಿಸುವಾಗ, ಅನುಸರಿಸಬೇಕಾದ ಕೆಲವು ನಿಶ್ಚಿತ ಮಾರ್ಗದರ್ಶನಗಳಿವೆ.

- ಮೊದಲನೆಯದಾಗಿ, ವರಗಳಿಗಿಂತಲೂ ಗುಣ ನಡತೆಯ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳಿರಿ ಸಭಾಪಾಲಕರು ವರಗಳನ್ನು ಬಿಡುಗಡೆ ಮಾಡುವುದಕ್ಕೆ ಮೊದಲು ಗುಣನಡತೆಯನ್ನು ನೋಡುತ್ತಾರೆ. ಯಾಕೆಂದರೆ ಇದರೊಂದಿಗೆ ಹೋಗುವ ಗುಣವು ನಿನಗೆ ಅವಶ್ಯವಾಗಿರುತ್ತದೆ. ಉದಾಹರಣೆಗೆ ನೀವು ನಿರ್ದಿಷ್ಟವಾದ ವರವನ್ನು ಹೊಂದಿದ್ದರೆ, ಸಭಾಪಾಲಕರು ನಿಮಗೆ ಅದನ್ನು ಉಪಯೋಗಿಸಲು ಅವಕಾಶ ಕೊಡುತ್ತಾರೆ ಮತ್ತು ಅದೇ ಸಮಯದಲ್ಲಿ ನಿಮ್ಮ ಗುಣನಡತೆಯನ್ನು ವೀಕ್ಷಿಸುತ್ತಾರೆ. ಗುಣನಡತೆಯು ವಿಶ್ವಾಸಾರ್ಹವಾಗಿದ್ದರೆ, ನಿಮ್ಮ ವರಗಳನ್ನು ಉಪಯೋಗಿಸಲು ಅಧಿಕವಾದ ಅವಕಾಶಗಳನ್ನು ನಿಮ್ಮ ಸಭಾಪಾಲಕರು ಕೊಡುತ್ತಾರೆ ಗುಣನಡತೆಯು ಇನ್ನೂ ಪ್ರಗತಿ ಹೊಂದಿರದಿದ್ದರೆ, ವೈಯಕ್ತಿಕ ಹವ್ಯಾಸಗಳು, ವಿವಾದಾಂಶ, ತಗಲಿಕೊಂಡಿರುವವುಗಳು ಅಥವಾ ಮನೋವೃತ್ತಿ ತೊಂದರೆಗಳಿಂದ ಹೊರಬರುವವರೆಗೂ ನಾವು ನಿಮ್ಮನ್ನು ಸ್ವಲ್ಪ ಸಮಯ ಅಲ್ಲೇ ಇರಿಸಿರುತ್ತೇವೆ. ಸಭಾಪಾಲಕರು ಮೊದಲ ದಿನದಲ್ಲೇ ನಿಮ್ಮನ್ನು ಮೇಲಿನ ಕೆಲಸದಲ್ಲಿಡಲು ಇಷ್ಟಪಡುವುದಿಲ್ಲ! ನಿಮಗೆ ಗುಣ ನಡೆತೆಯ ಅವಶ್ಯಕತೆಯಿದೆ, ಅದು ನೀವು ಇಚ್ಛಿಸುವ ವೃತ್ತಿಯನ್ನು ಮುಟ್ಟಿದಾಗ ಅದು ನಿಮಗೆ ಆಧಾರವಾಗಿರುತ್ತದೆ, ಇಲ್ಲವಾದರೆ ಕಾರ್ಯಗತಿಯಲ್ಲಿ ನಿಮಗೆ ನೀವೇ ನೋವು ಮಾಡಿಕೊಳ್ಳುತ್ತೀರಿ ಮತ್ತು ಇನ್ನೂ ಅನೇಕ ಇತರೆ ಜನರಿಗೂ ನೋವುಂಟು ಮಾಡುತ್ತೀರಿ.
- ವಿಶ್ವಾಸಾರ್ಹತೆಯನ್ನು ಬೆಳೆಸಿರಿ. ನಿಮ್ಮ ಸಭಾಪಾಲಕರಿಂದ ವಿಶ್ವಾಸಕ್ಕೆ ಅರ್ಹತೆಯನ್ನು ಸಂಪಾದಿಸಿಕೊಳ್ಳುವುದು ಅವಶ್ಯಕ.
- ನಿಮ್ಮ ಮೇಲೆ ಗಮನ ಸೆಳೆಯಲು ಅಪೇಕ್ಷಿಸಬೇಡಿರಿ ಕೆಲವು ಜನರು ದೇವರ ಮನೆಯಲ್ಲಿ ಸೇವೆಯ ಜವಾಬ್ದಾರಿಕೆಯನ್ನು ವಹಿಸಿಕೊಂಡಾಗ ಇತರ ವಿಶ್ವಾಸಿಗಳ

ಮಧ್ಯದಲ್ಲಿ ''ಜನಪ್ರಿಯ'' ಪುರುಷ ಅಥವಾ ಸ್ತ್ರೀಯಾಗಬೇಕೆಂಬ ಸ್ಥಿತಿಗೆ ಬರುತ್ತಾರೆ. ಇದು ಗಮನ ಹೊಂದಬೇಕೆಂಬ ಇಚ್ಛೆಯಿಂದ ಬಂದುದಾಗಿದೆ ಮತ್ತು ಇದು ಜನರನ್ನು ಕರ್ತನೆಡೆಗೆ ಬೊಟ್ಟು ಮಾಡದೇ 'ಸ್ವ' ದೆಡೆಗೆ ಅಥವಾ ತನ್ನೆಡೆಗೆ ಸೆಳೆದುಕೊಳ್ಳುತ್ತದೆ. ಆದುದರಿಂದ ದೇವರ ಸೇವಕರಾಗಿ ಜನರು ನಿಮ್ಮ ಹತ್ತಿರಕ್ಕೆ ಬಾರದೇ ಕರ್ತನ ಹತ್ತಿರಕ್ಕೆ ಬರಲಿ ಎಂಬುದನ್ನು ಖಚಿತಪಡಿಸಿಕೊಳ್ಳಿರಿ.

- ಮೊದಲು ನಿಮ್ಮ ಸೇವೆಯನ್ನು ತೋರ್ಪಡಿಸಿಕೊಳ್ಳಿರಿ ಆಮೇಲೆ ಜನರು ನಿಮ್ಮ ಕರೆಯನ್ನು ಗುರ್ತಿಸುತ್ತಾರೆ. ನಿಮ್ಮ ಸೇವೆಯನ್ನು ತೋರ್ಪಡಿಸಿಕೊಳ್ಳುವ ಮೊದಲು ನಿಮ್ಮ ಕರೆಯ ಕುರಿತು ಎಲ್ಲರ ಬಳಿ ಸಾರಿ ಹೇಳಲು ಹೋಗಬೇಡಿರಿ (''ನಾನು ಅಪೊಸ್ತಲನು'') ಸಭೆಯ ಸದಸ್ಯರುಗಳಿಲ್ಲದೆ ಒಬ್ಬರು ತನ್ನನ್ನು ತಾನೇ ಸಭಾಪಾಲಕನೆಂದು ಕರೆದುಕೊಳ್ಳುವುದು ಹಾಸ್ಯಾಸ್ಪದವಾಗಿರುತ್ತದೆಂಬುದನ್ನು ಯೋಚಿಸಿರಿ, ನೀವು ಯಾವುದನ್ನು ಮಾಡಲು ಕರೆಯಲ್ಪಟ್ಟಿದ್ದೀರೋ ಅದನ್ನೇ ಮಾಡಿರಿ ಮತ್ತು ನಿಮ್ಮ ಕರೆ ಮತ್ತು ಸೇವೆಯು ಪ್ರಕಟಗೊಳ್ಳುತ್ತದೆ. ಜನರು ಫಲವನ್ನು ನೋಡಲಿ. ಆಮೇಲೆ ನೀವು ಎಂತಹ ಬಗೆಯ ಮರವಾಗಿದ್ದೀರಿ ಎಂಬುದಾಗಿ ಗುರ್ತಿಸಲಿ!

- ನೀವೇ ಮುಂದಕ್ಕೆ ಹೋಗಬೇಡಿರಿ. ಆಹ್ವಾನಿಸುವವರೆಗೂ ಕಾದುಕೊಂಡಿರಿ, ನಾವು ದೊಡ್ಡ ಔತಣಕೂಟಕ್ಕೆ ಹೋಗಿರುವಾಗ ಕೊನೆಯಲ್ಲಿ ಕುಳಿತುಕೊಳ್ಳಬೇಕು ಮತ್ತು ಔತಣದ ಯಜಮಾನ ಬಂದು ನಮ್ಮೆಲ್ಲರನ್ನು ಮುಂದೆ ಬನ್ನಿರಿ ಎಂಬುದಾಗಿ ಕರೆಯುವನು ಎಂದು ಯೇಸು ಹೇಳಿದ್ದಾನೆ. ಅದು ಅಧಿಕವಾಗಿ ಗೌರವಾಸ್ಪದವಾಗಿದೆ. ನಿಮಗೆ ಅದ್ಭುತಕರವಾದ ಸ್ವರವಿದೆ ಎಂಬುದಾಗಿ ಊಹಿಸಿರಿ ಮತ್ತು ಕೆಲವು ಸಂಗೀತದ ವಾದ್ಯಗಳನ್ನು ಬಾರಿಸುತ್ತೀರಿ ಅಥವಾ ನುಡಿಸಲು ಬಹಳ ಸಾಮರ್ಥವಿದ್ದರೆ ನೀವು ಬಾರಿಸುವವರಾಗಿದ್ದು ಮತ್ತೊಬ್ಬ ಆರಾಧನಾ ನಾಯಕನ ಬಳಿ ಹೋಗಿ ನೀವು ಮಹಾ ಸಂಗೀತಗಾರನೆಂದು ಸುಮ್ಮನೆ ಹೇಳಬೇಡಿರಿ ಬದಲಾಗಿ ನಿಮ್ಮ ಸಾಮರ್ಥ್ಯವನ್ನಷ್ಟೇ ಹೇಳಿರಿ ಮತ್ತು ಬಾರಿಸಲು ಅಥವಾ ಆರಾಧನೆ ನೆಡೆಸಲು ಆಹ್ವಾನಿಸುವವರೆಗೂ ಕಾದುಕೊಂಡಿರಿ ಅದೇ ಪ್ರಕಾರವಾಗಿ ನೀವು ಪರೀಕ್ಷಾರ್ಥವಾಗಿ ಉಮೇದುಗಾರನಾಗಿ ಹಾಡಿ ತೋರಿಸಬೇಕು. ಸಾಮಾನ್ಯವಾಗಿ ಬಾರಿಸುವ ಮೊದಲು ಅಭ್ಯಾಸಕ್ಕೆ ತಪ್ಪದೆ ಬರಬೇಕು.-

- ನಿಮ್ಮ ಸಭಾಪಾಲಕರಿಗೂ ಮತ್ತು ನಾಯಕತ್ವದಲ್ಲಿರುವವರಿಗೂ ಜವಾಬುದಾರರಾಗಿರಿ. ಸಲಹೆಗಳನ್ನು ಅನುಸರಿಸಿರಿ ಮತ್ತು ವಿಷಯಗಳೊಡನೆ ಸಮಾನಾಂತರವಾಗಿ ಜೊತೆಗೂಡಿರಿ. ಪೂರ್ಣ ಸಭೆಯವರು ಮಾಡುವುದನ್ನು ಕರ್ತನು ನಡೆಸುತ್ತಿರುವಾಗ ನಿಮ್ಮ ಅತ್ಯುತ್ಸಾಹವು ಅದಕ್ಕೆ ಅಡ್ಡಿಯನ್ನುಂಟುಮಾಡಲು ಕಾರಣವಾಗಲು ಅವಕಾಶ ನೀಡದಿರಿ.
- ನಿಮ್ಮ ಬಹುಮಾನಕ್ಕಾಗಿ ದೇವರನ್ನು ದೃಷ್ಟಿಸಿರಿ. ಹಲವು ಜನರು ಅವರ ಬಹುಮಾನವು ಸಭಾಪಾಲಕರಿಂದ ಪೀಠದ ಕಡೆಯಿಂದ ಅಥವಾ ಕೆಲವು ವಿಶೇಷ ಬಗೆಯ ಹೊಗಳಿಕೆಯಿಂದ ಬರಬೇಕೆಂದು ಅಪೇಕ್ಷಿಸುತ್ತಾರೆ. ಒಂದು ವೇಳೆ ಇದೆಲ್ಲವೂ ಸಾಧ್ಯವಾಗಬಹುದು ಇದು ಜರುಗದಿದ್ದರೆ ನಿರುತ್ಸಾಹ ಅಥವಾ ಕಹಿಭಾವವನ್ನು ಹೊಂದಬೇಡಿರಿ ನೀವು ಕರ್ತನಿಗೆ ಸೇವೆ ಸಲ್ಲಿಸುತ್ತಿರುವಿರಿ. ನಿಮ್ಮ ಬಹುಮಾನವು ಆತನಿಂದಲೇ ಬರುವುದು.

## ವಚನಬದ್ಧತೆ ತೋರಿಸಿರಿ

**ನೀನು ನನ್ನಿಂದ ಅನೇಕ ಸಾಕ್ಷಿಗಳ ಮುಂದೆ ಕೇಳಿದ ಉಪದೇಶವನ್ನು ಇತರರಿಗೆ ಬೋಧಿಸ ಶಕ್ತರಾದ ನಂಬಿಗಸ್ತ ಮನುಷ್ಯರಿಗೆ ಒಪ್ಪಿಸಿಕೊಂಡು** (2 ತಿಮೊಥೆಯನಿಗೆ 2:2)

- ಸಾಮರ್ಥ್ಯಕ್ಕಿಂತ ನಂಬಿಗಸ್ತಿಕೆಯು ಬಹಳ ಪ್ರಾಮುಖ್ಯವಾದುದು. ಸಭಾಪಾಲಕರು ನಂಬಿಗಸ್ತ ಜನರನ್ನು ನೋಡುತ್ತಿದ್ದಾರೆ. ನಂಬಿಗಸ್ತ ಮನುಷ್ಯನು ಆಶೀರ್ವಾದ ಪೂರ್ಣನಾಗುವನು ಆದರೆ ಧನವಂತನಾಗಲು ಆತುರಪಡುವವನು ದಂಡನೆಯನ್ನು ಹೊಂದದಿರನು. (ಜ್ಞಾನೋಕ್ತಿಗಳು 28:20)
- ನೀವು ಒಂದು ಜವಾಬ್ದಾರಿಯನ್ನು ತೆಗೆದುಕೊಂಡಾಗ, ನೀವು ಅದರಲ್ಲಿ ನಂಬಿಗಸ್ತರಾಗಿದ್ದೀರೆಂಬುದನ್ನು ಖಚಿತಪಡಿಸಿಕೊಳ್ಳಿರಿ. ಉದಾಹರಣೆಗೆ, ನೀವು ಪ್ರತಿ ಭಾನುವಾರ ಸಭೆಗೆ ಮೂವತ್ತು ನಿಮಿಷ ಮೊದಲೇ ಬಂದು ಸಭೆಯ ಆವರಣವನ್ನು ಶುಚಿಗೊಳಿಸುತ್ತೀರೆಂಬುದಾಗಿ ವಚನ ಕೊಟ್ಟಿದ್ದರೆ ಪ್ರತಿ ಭಾನುವಾರ ನೀವು ಅದನ್ನು ಮಾಡಬೇಕು ಎಂಬುದನ್ನು ದಯವಿಟ್ಟು ಖಚಿತಮಾಡಿಕೊಳ್ಳಿರಿ ವಚನಬದ್ಧರಾಗಿರಿ ಮತ್ತು ವಿಶ್ವಾಸಾರ್ಹರಾಗಿರಿ. ಆ ಕೆಲಸವನ್ನು ಮಾಡಲು ನೀವು ಪಾವತಿಸಲ್ಪಟ್ಟಿಲ್ಲದಿರಬಹುದು. ಆದರೆ ಕೇವಲ ಸ್ವಯಂ ಸೇವಕರಾಗಿರಿ. ನಂಬಿಗಸ್ತರಾದ ಸ್ವಯಂ ಸೇವಕರಾಗಿರಿ.
- ಅನಿರೀಕ್ಷಿತ ವಿಷಯಗಳು ಎದುರಾಗಬಹುದು, ನೀವು ಅದನ್ನು ಮಾಡಲು ಅಸಾಧ್ಯವಾಗಬಹುದೆಂದು ಸಭಾಪಾಲಕರಿಗೆ ತಿಳಿಯುತ್ತದೆ. ನೀವು ಅದನ್ನು

ನೆರವೇರಿಸಲು ಅಶಕ್ತರಾದರೆ ಸಾಧ್ಯವಾದಷ್ಟು ಮೊದಲೇ ಅದರ ಕುರಿತು ಸಭಾಪಾಲಕರಿಗೆ ತಿಳಿಸಲು ಖಚಿತ ಪಡಿಸಿಕೊಳ್ಳಿರಿ.

- ನೀವು ಮಾಡುವುದರಲ್ಲಿ ಸಂತೋಷಿಸಿರಿ ಗುಣುಗುಟ್ಟಿಕೊಂಡು ಮಾಡುವವರು ಆನಂದದಾಯಕರಾಗಿರುವುದಿಲ್ಲ. ಯಾವುದಾದರೊಂದನ್ನು ಮಾಡುವುದರಲ್ಲಿ ನೀವು ಆನಂದಿಸದಿದ್ದರೆ, ನೀವು ಅದನ್ನು ಮಾಡದೇ ಇರುವುದು ಉತ್ತಮ.
- ಅದನ್ನು ಸಭಾಪಾಲಕರಿಗೋಸ್ಕರ ಮಾಡದೇ, ಕರ್ತನಿಗೊಸ್ಕರ ಮಾಡಿರಿ. ನಿಮ್ಮ ಸಭಾಪಾಲಕರನ್ನು ಮೆಚ್ಚಿಸಲು ಯಾವುದೊಂದನ್ನೂ ನೀವು ಮಾಡಬಾರದೆಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಅದನ್ನು ಕರ್ತನಿಗೊಸ್ಕರವೇ ಮಾಡಿರಿ.

## ಶ್ರೇಷ್ಟತೆ ಪಾಲಿಸು

- ನೀವು ಯಾವುದನ್ನು ಮಾಡಿದರೂ ಅದನ್ನು ಉತ್ತಮವಾಗಿ ಮಾಡಿರಿ. ದೇವರಿಗೆ ನಿಮ್ಮ ಅತ್ಯುತ್ತಮವಾದದ್ದನ್ನೇ ಕೊಡಿರಿ. ಹಲವು ಬಾರಿ ''ನಾನು ಬರೀ ಸ್ವಯಂ ಸೇವಕ, ನಾನು ಇದನ್ನು ಸೇವೆಗೋಸ್ಕರ ಮಾತ್ರ ಮಾಡುತ್ತಿದ್ದೇನೆ'' ಎಂಬುದಾಗಿ ನಾವು ಯೋಚಿಸುತ್ತೇವೆ. ಇಂತಹ ಮನೋಭಾವನೆಯು ನಿಮ್ಮದಾಗಿರದಿರಲಿ ನೀವು ಕರ್ತನಿಗಾಗಿ ಏನಾದರೂ ಮಾಡುವಾಗ, ಅದನ್ನು ಉತ್ತಮವಾಗಿ ಮಾಡಿರಿ ಮತ್ತು ದೇವರು ನಿಮಗೆ ಕೊಟ್ಟ ಸಾಮರ್ಥ್ಯಗಳಿಗೆ ತಕ್ಕಂತೆ ಬಹಳ ಉತ್ತಮವಾದುದ್ದನ್ನೇ ಕೊಡಿರಿ. ದೇವರು ನಿಮ್ಮಲ್ಲಿರುವಂತಹ ಅತ್ಯುತ್ತಮವಾದುದನ್ನು ಹೊಂದಲು ಯೋಗ್ಯನಾಗಿದ್ದಾನೆ.

## ದೇವರ ರಾಜ್ಯ ಕಟ್ಟುವವರಾಗಿರಿ

- ನೀವು ಸೇವೆ ಮಾಡುವಾಗ, ಒಂದು ನಿರ್ದಿಷ್ಟ ಸ್ಥಳೀಯ ಸಭೆಗೆ ಸೇವೆ ಸಲ್ಲಿಸುತ್ತಿಲ್ಲ, ಆದರೆ ದೇವರ ರಾಜ್ಯವನ್ನು ಕಟ್ಟುವುದಕ್ಕಾಗಿ ಮಾಡುತ್ತಿದ್ದೀರಿ ಎಂಬುದಾಗಿ ಜ್ಞಾಪಕದಲ್ಲಿಡಿರಿ. ನೀವು ಒಂದು ಸ್ಥಳೀಯ ಸಭೆಯ ಭಾಗವಾಗಿದ್ದರೂ ನೀವು ಅದನ್ನು ರಾಜಾಧಿರಾಜನಿಗೆ ಮಾಡುತ್ತಿರುವುದೆಂದು ನೆನಪಿಟ್ಟುಕೊಳ್ಳಬೇಕು. ನೀವು ಇದನ್ನು ಆತನ ರಾಜ್ಯ ಕಟ್ಟಲು ಮಾಡುತ್ತೀರಿ. ನೀವು ಸೇವೆ ಸಲ್ಲಿಸುತ್ತಿರುವ ಸ್ಥಳೀಯ ಸಭೆಯ ಹೆಸರನ್ನು ದಾಟಿ ಮುಂದೆ ನೋಡಿರಿ ಅದು, ಬರೀ ಹೆಸರು ಮಾತ್ರ.

- ಸ್ವಾರ್ಥ ಮತ್ತು ಸ್ವ ಕೇಂದ್ರೀಕೃತ ಗುಣವನ್ನು ತ್ಯಜಿಸಿರಿ. ನಿಮ್ಮ ಸ್ಥಳೀಯ ಸಭೆಯನ್ನು ಪ್ರವರ್ತಿಸಲು ಯಾವುದನ್ನೂ ಮಾಡಬೇಡಿರಿ. ನಿರ್ದಿಷ್ಟವಾಗಿ ದೇವರ ರಾಜ್ಯವನ್ನು ಪ್ರವರ್ತಿಸಲು ನೀವು ಅಲ್ಲಿ ಇರಿಸಲ್ಪಟ್ಟಿದ್ದೀರಿ ಎಂಬುದನ್ನು ನೆನಸಿಕೊಳ್ಳಿರಿ. ಎಲ್ಲಾ ಸಮಯಗಳಲ್ಲೂ ಕ್ರಿಸ್ತನನ್ನೇ ಮಹಿಮೆಪಡಿಸುವವರಾಗಿರಿ.
- ಸಭಾಸೇವಕರ ಇತರ ಸಭಾಸೇವೆಗಳ ಮತ್ತು ಸಭೆಗಳ ಮಧ್ಯದಲ್ಲಿ ಐಕ್ಯತೆಯನ್ನು ಪ್ರವರ್ತಿಸಿರಿ. ಬೇರೆ ಸಭೆಯ ವಿಶ್ವಾಸಿಗಳೊಂದಿಗೆ ಅನ್ಯೋನ್ಯತೆ ಬೆಳೆಸಲು ಭಯಪಡಬೇಡಿರಿ. ದೇವರ ರಾಜ್ಯ ಕಟ್ಟುವವರಾಗಿರಿ. ದೇವರ ರಾಜ್ಯವನ್ನು ಮುಂದಿಟ್ಟು ಆಲೋಚಿಸಿರಿ. ನಮ್ಮ ಮಧ್ಯದಲ್ಲಿ ಕ್ರಿಸ್ತನು ಮಹಿಮೆ ಹೊಂದುವಂತೆ ದೇವರ ರಾಜ್ಯ ಕಟ್ಟಲು ನೀವು ಏನು ಮಾಡಬಹುದೆಂಬುದಾಗಿ ಮತ್ತು ಸಭೆಗಳೊಂದಿಗೆ, ಸಭಾಸೇವೆಗಳೊಂದಿಗೆ ಹೇಗೆ ಕೆಲಸ ಮಾಡುವುದು ಎಂಬುದಾಗಿ ನಿಮ್ಮನ್ನು ನೀವೇ ಕೇಳಿಕೊಳ್ಳಿರಿ.

- ◆ ನಿಮ್ಮ ಸಭಾಪಾಲಕರ ಸಾಕ್ಷಿಯನ್ನು ಕಾಪಾಡಲು ಸಹಾಯಿಸಿರಿ.
- ◆ ನಿಮ್ಮ ಸಭಾಪಾಲಕರ ಸಮಯವನ್ನು ಕಾಪಾಡಲು ಸಹಾಯಿಸಿರಿ.
- ◆ ನಿಮ್ಮ ಸಭಾಪಾಲಕರ ಕುಟುಂಬವನ್ನು ಕಾಪಾಡಲು ಸಹಾಯಿಸಿರಿ.
- ◆ ಪ್ರತಿನಿಧಿಸುವ ನಾಯಕತ್ವವನ್ನು ಗೌರವಿಸಿ, ಅದರೊಂದಿಗೆ ಕೆಲಸಮಾಡಿರಿ.
- ◆ ಸಭೆಯ ದರ್ಶನ ಮತ್ತು ಕರೆಯೊಡನೆ ಜೊತೆಗೂಡಿ ಮುಂದುವರೆಯಿರಿ.
- ◆ ಸಭೆಯ ನಂಬಿಕೆ ಮತ್ತು ಬೋಧನೆಗಳೊಂದಿಗೆ ಜೊತೆಗೂಡಿ ಮುಂದುವರೆಯಿರಿ.
- ◆ ಸೇವಕರಾಗಿರಿ.
- ◆ ವಚನಬದ್ಧತೆಯನ್ನು ತೋರಿಸಿರಿ
- ◆ ಶ್ರೇಷ್ಟತೆ ಪಾಲಿಸಿರಿ
- ◆ ದೇವರ ರಾಜ್ಯ ಕಟ್ಟುವವರಾಗಿರಿ

# 3

# ನಿಮ್ಮ ಸಭಾಪಾಲಕರು ಮನುಷ್ಯರೇ

ಕೆಲವು ಬಾರಿ ಜನರು, ಅವರ ಸಭಾಪಾಲಕರು ಸಹ ಮನುಷ್ಯರು ಎಂಬುದನ್ನು ಮರೆತುಬಿಡುತ್ತಾರೆ. ಅವರಂತೆಯೇ ಅನುರಾಗ ಹೊಂದಿರುವ ಮನುಷ್ಯರು! (ಅವರು ಸಂಪತ್ತನ್ನು ರುಚಿಯನ್ನು ಆನಂದಿಸುತ್ತಾರೆ. ಬಿರಿಯಾನಿಯನ್ನು ಸಹ!) ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಇಲ್ಲಿ ಕೆಲವು ಪ್ರಾಯೋಗಿಕ ಸಲಹೆಗಳಿವೆ.

- ಒಬ್ಬ ಮನುಷ್ಯನನ್ನು ಅತೀ ಎತ್ತರದಲ್ಲಿಡಬೇಡಿರಿ. ಕೆಲವು ಜನರು ಅವರ ಸಭಾಪಾಲಕರನ್ನು ''ಕ್ರೈಸ್ತಸೂಪರ್ ಸ್ಟಾರ್''ನಂತೆ ಸತ್ಕರಿಸುತ್ತಾರೆ ಮತ್ತು ಅವರ ಸಭಾಪಾಲಕನು ಅತಿಮಾನವ (ಸೂಪರ್ ಮ್ಯಾನ್) ಎಂಬುದಾಗಿ ಆಲೋಚಿಸುತ್ತಾರೆ. ಸರಳವಾದ ಸ್ಪಷ್ಟವಾದ ಸತ್ಯ ಇಲ್ಲಿದೆ. ನಿಮ್ಮ ಸಭಾಪಾಲಕರು ''ಸೂಪರ್ ಸ್ಟಾರ್'' ಅಲ್ಲ ಮತ್ತು ನಿಶ್ಚಯವಾಗಿ ಸೂಪರ್ ಮ್ಯಾನ್ ಕೂಡ ಅಲ್ಲ. ಆದುದರಿಂದ ನಿಮ್ಮ ಸಭಾಪಾಲಕರನ್ನು ಸೂಪರ್ ಸ್ಟಾರ್‌ತನದೊಡನೆ ''ಅಭಿಷೇಕಿಸ' ಬೇಡಿರಿ! ಒಬ್ಬ ಮನುಷ್ಯನ ಬಗ್ಗೆ ಶ್ರೇಷ್ಟವಾಗಿ ಆಲೋಚಿಸುವುದು ದೈವಿಕವಾದುದಲ್ಲ ಮತ್ತು ಒಳ್ಳೆಯದೂ ಅಲ್ಲ. ದೈವ-ದತ್ತ ನಾಯಕತ್ವವನ್ನು ಗೌರವಿಸಿರಿ ಮತ್ತು ಅಭಿನಂದಿಸಿರಿ. ಆದರೆ ಮನುಷ್ಯನಿಗೆ ನ್ಯಾಯವಲ್ಲದ ಪ್ರಾಮುಖ್ಯತೆಯನ್ನು ಕೊಡಬೇಡಿರಿ.

  **ಆದಕಾರಣ ಮನುಷ್ಯ ಮಾತ್ರದವರ ವಿಷಯದಲ್ಲಿ ಯಾರೂ ಹಿಗ್ಗದಿರಲಿ ಯಾಕೆಂದರೆ ಸಮಸ್ತವೂ ನಿಮ್ಮದು,** (1ಕೊರಿಂಥದವರಿಗೆ 3:21)

  **ಸಹೋದರರೇ, ನಾನು ನಿಮಗೋಸ್ಕರವೇ ಹಿಂದಣ ಮಾತುಗಳನ್ನು ಸಾಮ್ಯರೂಪವಾಗಿ ನನ್ನ ವಿಷಯದಲ್ಲಿಯೂ ಅಪೊಲ್ಲೋಸನ ವಿಷಯದಲ್ಲಿಯೂ ಹೇಳಿದ್ದೇನೆ. ನೀವು ನಮ್ಮನ್ನು ದೃಷ್ಟಾಂತವಾಗಿ ಇಟ್ಟುಕೊಂಡು ಶಾಸ್ತ್ರದಲ್ಲಿ ಬರೆದಿರುವದನ್ನು ಮೀರಿ ಹೋಗಬಾರದೆಂಬದನ್ನೂ ನಿಮ್ಮಲ್ಲಿ ಯಾರೂ ಒಬ್ಬ ಬೋಧಕನನ್ನು ವಿರೋಧಿಸಿ ಮತ್ತೊಬ್ಬನ ಪಕ್ಷವನ್ನು ಹಿಡಿದು ಉಬ್ಬಿಕೊಳ್ಳಬಾರದೆಂಬುದನ್ನೂ ಕಲಿತುಕೊಳ್ಳಬೇಕು.** (1 ಕೊರಿಂಥದವರಿಗೆ 4:6).

- ನಿಮ್ಮ ಸಭಾಪಾಲಕರ ಮೇಲೆ ಅವಲಂಬಿಗಳಾಗಬೇಡಿರಿ. ನೀವು ಆತ್ಮೀಕವಾಗಿ ಬೆಳೆಯುವುದು ಅಗತ್ಯ ಮತ್ತು ನೀವು ವೈಯಕ್ತಿಕವಾಗಿ ಕರ್ತನೊಡನೆ ನಡೆಯುವುದನ್ನು ಕಲಿಯಬೇಕು. ನಿಮ್ಮ ಸಭಾಪಾಲಕರು ನಿಮಗೆ ಸಹಾಯ

ಮಾಡಲು ಇದ್ದಾಗಲೂ, ಪ್ರತಿಯೊಬ್ಬ ವಿಶ್ವಾಸಿಯು ಕರ್ತನೊಡನೆ ವೈಯಕ್ತಿಕ ಸಂಬಂಧವನ್ನು ಬೆಳೆಸಿಕೊಳ್ಳಬೇಕು. ದೇವರ ವಾಕ್ಯವನ್ನು ಕಲಿಯಬೇಕು, ಅಧ್ಯಯನ ಮಾಡಬೇಕು ಮತ್ತು ನಿಮ್ಮನ್ನೇ ದೇವರ ವಾಕ್ಯದಿಂದ ಪೋಷಿಸಿಕೊಳ್ಳಬೇಕು. ಪ್ರಾರ್ಥಿಸುವುದನ್ನು ಕಲಿಯಬೇಕು ಮತ್ತು ನೀವೇ ದೇವರಲ್ಲಿ ನಂಬಿಕೆ ಹೊಂದಿಕೊಳ್ಳಬೇಕು ಬೆಳವಣಿಗೆ ಹೊಂದಿರಿ, ಆತ್ಮಿಕ ಶೈಶವದಿಂದ ಹೊರಬಂದು ಪದವೀಧರರಾಗಿರಿ ಮತ್ತು ಇತರರನ್ನು ನಂಬಿಕೆಯಲ್ಲಿ ಪಾಲನೆ ಮಾಡಲು ಸಹಾಯ ಮಾಡುವ ಆತ್ಮಿಕ ತಂದೆ ಅಥವಾ ತಾಯಿಗಳಾಗಿರಿ.

- ನಿಮ್ಮ ಅಭಿಷೇಕವು ದೇವರಿಂದ ಬರುವುದಾಗಿದೆ. ಒಂದು ವೇಳೆ ಅಭಿಷೇಕ ನಾಯಕತ್ವದ ಮೂಲಕವಾಗಿ ಆತ್ಮಿಕ ತಿಳುವಳಿಕೆ ಜರುಗುವುದು ನಿಜ. ಆದರೆ ಅಂತಿಮವಾಗಿ ನಿಮ್ಮ ಅಭಿಷೇಕವು ದೇವರಿಂದ ಬರುತ್ತದೆ ಎಂಬುದಾಗಿ ಜ್ಞಾಪಕದಲ್ಲಿಟ್ಟುಕೊಳ್ಳಿರಿ. ದೇವರು ಮಾತ್ರ ಅಭಿಷೇಕಿಸುವವನಾಗಿದ್ದಾನೆ. ನಿಮ್ಮ ಸಭಾಪಾಲಕರ ಅಭಿಷೇಕದ ಜೆರಾಕ್ಸ್ ಪ್ರತಿ (ನಕಲಿ ಪ್ರತಿ) ಯನ್ನು ನೀವು ಹೊಂದಿರುವುದಿಲ್ಲ. ನಿಮ್ಮ ವೈಯಕ್ತಿಕ ವರಗಳು ಮತ್ತು ಅಭಿಷೇಕವನ್ನು ದೇವರಿಂದ ಪಡೆದು ಅವನ್ನು ನೀವೇ ಬೆಳೆಸಿಕೊಳ್ಳಬೇಕು. ನಿಮ್ಮ ಸಭಾಪಾಲಕರ ಮತ್ತು ಸ್ಥಳೀಯಸಭೆಯ ಮೇಲಿರುವ ಅಭಿಷೇಕ ಮತ್ತು ಮೇಲಂಗಿಯು ನೀವು ಕರ್ತನಿಂದ ಪಡೆದುಕೊಂಡಿರುವುದನ್ನು ಹೆಚ್ಚಿಸಬಹುದು. ಆದರೆ ಅಂತಿಮವಾದ ನಿಮ್ಮ ಅಭಿಷೇಕವು ದೇವರ ಮುಂದೆ ನೀವು ನೆಡೆದುಕೊಳ್ಳುವುದರಲ್ಲಿ ಅವಲಂಬಿತವಾಗಿರುತ್ತದೆ.

**ಯೋಹಾನನು ''ಪರಲೋಕದಿಂದ ಅನುಗ್ರಹಿಸೋಣವಾದದ್ದನ್ನೇ ಹೊರತು ಮನುಷ್ಯನು ಹೆಚ್ಚೇನು ಹೊಂದಲಾರನು'' ಎಂದು ಹೇಳಿದನು.** (ಯೋಹಾನ 3:27)

**ನಮ್ಮನ್ನು ಅಭಿಷೇಕಿಸಿ ಕ್ರಿಸ್ತನ ಅನ್ಯೋನ್ಯತೆಯಲ್ಲಿ ಸೇರಿಸಿ ನಮ್ಮನ್ನು ನಿಮ್ಮೊಂದಿಗೆ ಸ್ಥಿರಪಡಿಸುವನು ದೇವರೇ,** (2 ಕೊರಿಂಥದವರಿಗೆ 1:21)

- ಅತಿಬೇಗನೆ ತೀರ್ಪು ಮಾಡಬೇಡಿರಿ. ಯಾಕೆಂದರೆ ನ್ಯಾಯವಲ್ಲದ ಮತ್ತು ಅಧಿಕ ನಿರೀಕ್ಷೆಗಳಿಂದ ಜನರು ಅವರ ಸಭಾಪಾಲಕರ ಕುರಿತು ವಿಮರ್ಶಾತ್ಮಕರಾಗುತ್ತಾರೆ ಮತ್ತು ಯಾವುದಾದರೂ ಮಾರ್ಗದಲ್ಲಿ ಅವರ ನಿರೀಕ್ಷಣೆಗಳನ್ನು ಪಡೆಯುವಲ್ಲಿ ಸೋತರೆ ಅಥವಾ ಅವರು ತಪ್ಪುಗಳನ್ನು ಮಾಡಿದರೆ ಸುಲಭವಾಗಿ ಅವರು ಸಭಾಪಾಲಕರ ವಿರುದ್ಧವಾಗಿ ಎದ್ದೇಳುತ್ತಾರೆ. ಆಲ್ ಫೀಪಲ್ಸ್ ಚರ್ಚ್‌ನಲ್ಲಿ

ಬಹಳ ಸಹಾಯಕಾರಿಗಳಾದ ಮತ್ತು ಅತ್ಯಂತವಾಗಿ ಅರ್ಥಮಾಡಿಕೊಳ್ಳುವ ಸಭಿಕರನ್ನು ಹೊಂದಿರುವುದರಲ್ಲಿ ನಾನು ಆಶೀರ್ವದಿಸಲ್ಪಟ್ಟಿದ್ದೇನೆ. ಹಾಗಿದ್ದಾಗ್ಯೂ ವಿಜ್ಞಾಪಿಸುವುದಕ್ಕಾಗಿ ನಾನು ಇದನ್ನು ಇಲ್ಲಿ ವ್ಯಾಖ್ಯಾನಿಸುತ್ತಿದ್ದೇನೆ. - ನಿಮ್ಮ ಸಭಾಪಾಲಕರಿಗೆ ಅತಿ ಬೇಗನೆ ತೀರ್ಪುಮಾಡಬೇಡಿರಿ. ನಿಮ್ಮಂತೆಯೇ, ನಿಮ್ಮ ಸಭಾಪಾಲಕರು, ಮುಂದುವರಿಯುತ್ತಿರುವ ಕೆಲಸ ಕಟ್ಟಲ್ಪಡುವ ಹಂತದಲ್ಲಿರುವ ಒಂದು ಕಟ್ಟಡವಾಗಿದ್ದಾರೆ. ಆದ್ದರಿಂದ ದಯವಿಟ್ಟು ಅವ್ಯವಸ್ಥೆಯನ್ನು ಮನ್ನಿಸಿರಿ, ದಯವಿಟ್ಟು ತಾಳ್ಮೆಯಿಂದಿರಿ.

**ನನಗಾದರೋ ನಿಮ್ಮಿಂದಾಗಲಿ ಮನುಷ್ಯರು ನೇಮಿಸುವ ದಿನದಲ್ಲಾಗುವ ನ್ಯಾಯ ಸಭೆಯಿಂದಾಗಲಿ ವಿಚಾರಣೆಯಾಗುವುದು ಅತ್ಯಲ್ಪ ಕಾರ್ಯವಾಗಿದೆ. ನಾನೂ ನನ್ನನ್ನು ವಿಚಾರಿಸಿಕೊಳ್ಳುವುದಿಲ್ಲ ನನ್ನಲ್ಲಿ ದೋಷವಿದೆಯಂದು ನನ್ನ ಬುದ್ಧಿಗೆ ತೋರುವುದಿಲ್ಲವಾದರೂ ದೋಷವಿಲ್ಲದವನೆಂಬ ನಿರ್ಣಯವು ಇದರಿಂದಾಗುವದಿಲ್ಲ; ನನ್ನನ್ನು ವಿಚಾರಣೆ ಮಾಡುವವನು ಕರ್ತನೇ ಆದುದರಿಂದ ಕಾಲಕ್ಕೆ ಮೊದಲು ಯಾವದನ್ನು ಕುರಿತೂ ತೀರ್ಪು ಮಾಡಬೇಡಿರಿ. ಕರ್ತನು ಬರುವ ತನಕ ತಡೆಯಿರಿ. ಆತನು ಕತ್ತಲೆಯಲ್ಲಿರುವ ಗುಪ್ತ ಕಾರ್ಯಗಳನ್ನು ಬೆಳಕಿಗೆ ತರುವನು, ಹೃದಯದ ಯೋಚನೆಗಳನ್ನು ಪ್ರತ್ಯಕ್ಷ ಪಡಿಸುವನು, ಆ ಕಾಲದಲ್ಲಿ ಪ್ರತಿಯೊಬ್ಬನಿಗೆ ಬರತಕ್ಕ ಹೊಗಳಿಕೆಯು ದೇವರಿಂದ ಬರುವದು. (1 ಕೊರಿಂಥದವರಿಗೆ 4:3-5).**

- ನಿಮ್ಮ ಸಭಾಪಾಲಕರು ಸೂಪರ್ ಸ್ಟಾರ್ ಅಲ್ಲ ಮತ್ತು ನಿಶ್ಚಿತವಾಗಿ ಸೂಪರ್ ಮ್ಯಾನ್ ಅಲ್ಲ. ಆದುದರಿಂದ ದಯವಿಟ್ಟು **ಅವರನ್ನು ಸೂಪರ್ ಸ್ಟಾರ್ ಆಗಿ 'ಅಭಿಷೇಕಿಸ' ಬೇಡಿರಿ.**
- **ನಿಮ್ಮ ಸಭಾಪಾಲಕರ ಮೇಲೆ ಅವಲಂಬಿತರಾಗಬೇಡಿರಿ**. ನೀವು ಆತ್ಮಿಕವಾಗಿ ಬೆಳವಣಿಗೆ ಹೊಂದುವುದು ಮತ್ತು ನೀವು ಕರ್ತನೊಡನೆ ಸ್ವತಹ ನಡೆಯುವುದನ್ನು ಕಲಿಯಬೇಕಾದುದು ಅಗತ್ಯ.
- **ನಿಮ್ಮ ಅಭಿಷೇಕವು ದೇವರಿಂದ ಬರುವುದಾಗಿದೆ**. ಅಭಿಷಿಕ್ತ ನಾಯಕತ್ವದ ಮೂಲಕ ಆತ್ಮಿಕ ಪ್ರಜ್ಞೆ ಉಂಟಾಗುವುದು ನಿಜವಾದುದು, ಅಂತಿಮವಾಗಿ ನಿಮ್ಮ ಅಭಿಷೇಕವು ದೇವರಿಂದ ಬರುವುದಾಗಿದೆ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು.
- **ಅತಿ ಬೇಗನೇ ನಿಮ್ಮ ಸಭಾಪಾಲಕರ ಕುರಿತು ತೀರ್ಪು ಮಾಡಬೇಡಿರಿ**. ನಿಮ್ಮಂತೆಯೇ ನಿಮ್ಮ ಸಭಾಪಾಲಕರು ಇನ್ನೂ ಪ್ರಗತಿಯಲ್ಲಿರುವ ಒಂದು ಕೆಲಸ, ಇನ್ನೂ ಕಟ್ಟಲ್ಪಡುತ್ತಿರುವ ಒಂದು ಕಟ್ಟಡವಾಗಿದ್ದಾರೆ.

## ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು. (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಭೇತಿಗೊಳಿಸುವುದು (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಭೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾಸೇವಕರ ಸಮಾವೇಶವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚ್ಚುಗೆವುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ನಮ್ಮ ಕಛೇರಿಯ ವಿಳಾಸವಾದ "ಆಲ್ ಪೀಪಲ್ಸ್ ಸಭೆ ಬೆಂಗಳೂರು" ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು

Account Name: All Peoples Church
Account Number: 0057213809,
IFSC Code: CITI0000004
Bank: Citibank N.A., 506-507,
Level 5, Prestige Meridian 2, # 30,
M.G. Road, Bangalore - 560 001

*ದಯವಿಟ್ಟು ಗಮನಿಸಿ: ಆಲ್ ಪೀಪಲ್ಸ್ ಸಭೆಯು FCRA ಅನುಮತಿ ಹೊಂದಿಲ್ಲ ಮತ್ತು ಭಾರತೀಯ ನಾಗರೀಕರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು.*

ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ! ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!

ಡುವುದು

## ಆಲ್ ಪೀಪಲ್ಸ್ ಚರ್ಚ್‌ನ ಪ್ರಕಟಣೆಗಳು

ಕೆಲಸದ ಕಡೆಗೆ ಸತ್ಯವೇದದ ನೋಟ
ನಿನ್ನ ಕರೆಯನ್ನು ಕಡೆಗಣಿಸದಿರು
ನಿರೀಕ್ಷೆಯನ್ನು ಕಳೆದುಕೊಳ್ಳಬೇಡ
ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು
ವೈಯುಕ್ತಿಕ ಮತ್ತು ತಲೆಮಾರಿನ ಬಂಧನಗಳನ್ನು ಮುರಿಯುವುದು
ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು
ದೇವರ ರಾಜ್ಯ ಕಟ್ಟುವವರು
ಪರಲೋಕವೆಂದು ಕರೆಯಲ್ಪಡುವ ನಿಜ ಸ್ಥಳ
ದೇವರ ಉದ್ದೇಶಗಳಿಗೆ ಜನ್ಮ ಕೊಡುವುದು
ಬೇರುಗಳಿಗೆ ಕೊಡಲಿ ಹಾಕುವುದು
ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು
ಉಜ್ಜೀವನದಲ್ಲಿ ಒಂದು ಸಭೆ
ದೇವರ ಪ್ರಸನ್ನತೆ
ಜ್ಞಾನ, ಪ್ರಕಟನೆ ಮತ್ತು ಬಲದ ಆತ್ಮನು
ದೇವರು ಒಳ್ಳೆಯ ದೇವರಾಗಿದ್ದಾನೆ
ಅಸ್ತಿವಾರಗಳು ಭಾಗ - 1
ತೆರೆದ ಪರಲೋಕಗಳು
ಜೀವನದ ರಾತ್ರಿಯ ಸಮಯಗಳು
ಪ್ರಾಮಾಣಿಕತೆ
ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ
ಪರಿವರ್ತನೆ
ಗೌರವದ ಸಂಕೇತ

### ಉಚಿತ ಇ-ಪುಸ್ತಕಗಳು

ನಮ್ಮ ಚರ್ಚ್ ವೆಬ್ ಸೈಟ್‌ನಿಂದ ನಮ್ಮ ಎಲ್ಲಾ ಪುಸ್ತಕಗಳ ಪಿ ಡಿ ಎಫ್ ಅನುವಾದವನ್ನು ಉಚಿತವಾಗಿ ಸಂಗ್ರಹಿಸಲು ದೊರೆಯುತ್ತವೆ. ಇತರೆ ಪ್ರಾದೇಶಿಕ ಭಾಷೆಗಳಲ್ಲೂ ಸಹ ಈ ಪುಸ್ತಕಗಳು ದೊರೆಯುತ್ತದೆ. ಇಂತಹ ಉಚಿತ ಪುಸ್ತಕಗಳಿಗಾಗಿ ಇ-ಮೇಲ್ ಅಥವಾ ಅಂಚೆಯ ಮೂಲಕವಾಗಿ ನಮ್ಮನ್ನು ಸಂಪರ್ಕಿಸಬಹುದಾಗಿದೆ.

### ಉಚಿತ ಆಡಿಯೋ ಮತ್ತು ವೀಡಿಯೊ ಸಂದೇಶಗಳು

'ಲಿವಿಂಗ್ ಸ್ಪ್ರಿಂಗ್ ಎಂಬ ಗಾಡ್ ಟಿವಿಯ ಕಾರ್ಯಕ್ರಮದ ಮತ್ತು ಸಮಾವೇಶಗಳ ವಿಡಿಯೋ ರೆಕಾರ್ಡಿಂಗ್ ಗಳಿಗಾಗಿ ಮತ್ತು ನಮ್ಮ ಭಾನುವಾರದ ಸಂದೇಶಗಳ ಆಡಿಯೋ ರೆಕಾರ್ಡಿಂಗ್ (MP3)ಗಳಿಗಾಗಿ ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿ.

# ಸತ್ಯವೇದ ಶಾಲೆ

ಮತ್ತು ಸೇವಾತರಬೇತಿಕೇಂದ್ರ

ಆಲ್ ಪೀಪಲ್ಸ್ ಸಭೆ - ಮತ್ತು ಸೇವಾತರಬೇತಿ ಕೇಂದ್ರ (A P C - BC & MTC) 2005 ರ ಆಗಸ್ಟ್ ತಿಂಗಳಲ್ಲಿ ಸ್ಥಾಪಿತವಾಯಿತು. ಇಲ್ಲಿ ಪುರುಷರು ಮತ್ತು ಸ್ತ್ರೀಯರನ್ನು ಸೇವೆಗಾಗಿ ಸಿದ್ಧಗೊಳಿಸಿ, ತರಬೇತಿಗೊಳಿಸಿ, ನಂಬಿಗಸ್ಥರಾದವರನ್ನು ಭಾರತದೇಶಕ್ಕೂ ಇತರದೇಶಗಳಿಗೂ - ಹಳ್ಳಿ, ಪಟ್ಟಣ, ನಗರ ಮತ್ತು ರಾಷ್ಟ್ರಗಳನ್ನು ಯೇಸುಕ್ರಿಸ್ತನಿಗಾಗಿ ಗೆಲ್ಲಲು ತರಬೇತಿಗೊಳಿಸುತ್ತೇವೆ.

**ಎ.ಪಿ.ಸಿ - ಬಿ.ಸಿ. / ಎಂ.ಟಿ.ಸಿ. - 2 ಪರಿವಿಡಿಗಳನ್ನು ನೀಡುತ್ತದೆ.**

- ಶೈಕ್ಷಣಿಕ ಪರಿಣಿತಿಯೊಡನೆ ಆತ್ಮಿಕ ಮತ್ತು ಪ್ರಾಯೋಗಿಕ ಸೇವಾತರಬೇತಿಯನ್ನು ಒದಗಿಸುವುದಕ್ಕಾಗಿ ಪೂರ್ಣಾವಧಿ ವಿದ್ಯಾರ್ಥಿಗಳಿಗಾಗಿ 2 ವರ್ಷಗಳ ಸತ್ಯವೇದ ಶಾಲೆಯ ಶಿಕ್ಷಣ ಪರಿವಿಡಿ. 2 ವರ್ಷಗಳ ಪರಿವಿಡಿಗಳನ್ನು ಮುಗಿಸಿದ ವಿದ್ಯಾರ್ಥಿಗಳು **ಡಿಪ್ಲೋಮಾ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ** (Dip.Th/Cm) ಪಡೆದುಕೊಳ್ಳುತ್ತಾರೆ. ತರಗತಿಗಳು ಆಂಗ್ಲಭಾಷೆಯಲ್ಲಿ ನಡೆಸಲ್ಪಡುತ್ತವೆ. ನಮ್ಮ ಬೋಧನಾ ವಿಭಾಗವು ತರಬೇತಿಹೊಂದಿದ ಮತ್ತು ದೇವರ ವಾಕ್ಯದ ಅಭಿಷೇಕ ಹೊಂದಿದ ಶಿಕ್ಷಕರನ್ನು ಒಳಗೊಂಡಿದೆ. ಎಲ್ಲಾ ಬೋಧಕರು ಹಾಗೂ ವಿದ್ಯಾರ್ಥಿಗಳು ಎ.ಪಿ.ಸಿ ಯ ಅಧ್ಯಯನ ಕೇಂದ್ರ ಮತ್ತು ಗ್ರಂಥಾಲಯವನ್ನು (Sc & L) ಉಪಯೋಗಿಸಬಹುದಾಗಿದೆ.

- ಪ್ರಾಯೋಗಿಕ ತರಬೇತಿ ಹೊಂದಲು ಅಪೇಕ್ಷಿಸುವ ನಮ್ಮ ಸತ್ಯವೇದ ಶಾಲೆಯ ಪಧವೀದರರಿಗೆ ಪ್ರಾಯೋಗಿಕ ಸೇವಾ ತರಬೇತಿ ನೀಡುತ್ತೇವೆ. ಒಂದು ಅಥವಾ ಹೆಚ್ಚಿನ ವರ್ಷಗಳನ್ನು ಮುಗಿಸಿದವರು **ಪ್ರಾಯೋಗಿಕ ಸೇವಾ ಪ್ರಮಾಣಪತ್ರ** ಪಡೆದುಕೊಳ್ಳುತ್ತಾರೆ ಮತ್ತು ತೊಡಗಿಸಿಕೊಂಡ ಅವಧಿಯು ಸ್ಪಷ್ಟವಾಗಿ ನಮೂದಿಸಲ್ಪಡುತ್ತದೆ.

ಹೆಚ್ಚಿನ ಮಾಹಿತಿಗಳಿಗಾಗಿ www.apcwo.org/biblecollege ನ್ನು ಸಂಪರ್ಕಿಸಿ.

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರದಲ್ಲಿ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂಬುದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ನಾವು, ಆತನ ಪವಿತ್ರಾತ್ಮನ ಪ್ರಮಾಣೀಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅದ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ. (1 ಕೊರಿಂಥದವರಿಗೆ 2: 4,5, ಇಬ್ರಿಯರಿಗೆ 2: 3,4.) ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆ ನಮ್ಮ ಗುರಿಯಾಗಿದೆ.

ಬೆಂಗಳೂರನ್ನು ಪ್ರಮುಖವಾಗಿಟ್ಟುಕೊಂಡು, ಹೊಸ ಸಭೆಗಳು ನಿಯತಕಾಲಿಕವಾಗಿ ಭಾರತದಾದ್ಯಂತ ಸ್ಥಾಪಿಸಲ್ಪಡುತ್ತಿವೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪ್‌ಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿರಿ. www.apcwo.org ಅಥವಾ contact@apcwo.org ಗೆ ಇ-ಮೇಲ್ ಕಳುಹಿಸಿರಿ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದೀರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು.

ಆತನು ಪಾಪರಹಿತ ಜೀವನ ನಡಿಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ - ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು. ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಅದ್ಭುತ ಕಾರ್ಯಗಳು ನಮಗೆ ದೇವರು, ಒಳ್ಳೆಯ ದೇವರು, ಆತನು ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಬಯಸುತ್ತಾನೆ. ದೇವರು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತವೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಅಂಗೀಕಾರವಾಗದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು, ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಕೆಗೊಳಿಸುತ್ತದೆ. ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೆನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ''ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರವ ನಿತ್ಯಜೀವ'' ಎಂದು ಹೇಳುತ್ತದೆ (ರೋಮಪುರ 6:23) ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು. ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ, ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ, ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ. ನೀನು ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಮತ್ತು ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

**''ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು''** (ಅಪೊಸ್ತಲರ ಕೃತ್ಯ 10:43)

**''ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬುದೇ''** (ರೋಮಾಪುರದವರಿಗೆ 10:9)

ನೀವು ಸಹ ಯೇಸುಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪರಿಹಾರಗಳನ್ನು ಹೊಂದಿಕೊಳ್ಳಬಹುದು. ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥ ಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್‍ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ ನನ್ನ ಬಾಯಿಂದ, ''ನೀನು ನನಗಾಗಿ ಸತ್ತೇ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ. ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ'' ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯಮಾಡು. ಆಮೇನ್*

ನಮ್ಮಲ್ಲಿ ಹಲವರು ತಂದೆತಾಯಂದಿರಾಗಿ, ಮಕ್ಕಳನ್ನು ಬೆಳೆಸುವಾಗ ಹೆಚ್ಚಾದ ಪ್ರೀತಿಯನ್ನು ಅವರಿಗೆ ತೋರಿಸುತ್ತಾರೆ. ಆದಾಗ್ಯೂ, ಕೆಲವು ಸಮಯಗಳಲ್ಲಿ ಏಟುಗಳನ್ನು ಸಹ ಕೊಡುತ್ತೇವೆ!. ಇದು ನಮ್ಮ ಮಕ್ಕಳನ್ನು ನಾವು ದ್ವೇಷಿಸುತ್ತೇವೆ ಎಂಬುದಾಗಿ ಅರ್ಥವಲ್ಲ, ಆದರೆ ಅವರನ್ನು ಪ್ರಬಲರನ್ನಾಗಿ ಎಬ್ಬಿಸಬೇಕೆಂದು ನಮ್ಮ ಅಪೇಕ್ಷೆಯಾಗಿರುತ್ತದೆ. ಅದೇ ರೀತಿಯಾಗಿ ಸಭೆಯಲ್ಲಿ ಪ್ರಬಲ ಜನರನ್ನು ಎಬ್ಬಿಸಬೇಕೆಂಬುದಾಗಿ ನಾವು ಅಪೇಕ್ಷಿಸುವಾಗ, ದೇವರ ನಿವಾಸದಲ್ಲಿ ಅವರು ಮಾಡಬೇಕಾದುದು ಏನೆಂಬುದಾಗಿ ಬೋಧಿಸುವುದು ಅಗತ್ಯವಾಗಿದೆ.

ದುರಾದೃಷ್ಟಕರವಾಗಿ, ಇಂತಹ ವಿಷಯಗಳ ಬಗ್ಗೆ ಅಧಿಕವಾದ ಬೋಧನೆಗಳಿಲ್ಲ ಮತ್ತು ಪ್ರತಿಯೊಬ್ಬನು, ತಾನು ಯಾವುದು ಸರಿ ಎಂಬುದಾಗಿ ಯೋಚಿಸುತ್ತಾನೋ ಅದನ್ನೇ ಮಾಡುತ್ತಿದ್ದಾನೆ. ಸಭೆಯಲ್ಲಿರುವ ಜನರು ತಮ್ಮ ಮನಸ್ಸುಗಳಲ್ಲಿರುವುದನ್ನೇ ಮಾಡುತ್ತಿದ್ದಾರೆ. ಮತ್ತು ಸಭೆಯನ್ನು ಭಿನ್ನವಾದ ದಿಕ್ಕುಗಳೆಡೆಗೆ ಸೆಳೆಯುತ್ತಾರೆ, ಹೀಗಾಗಿ ಸಭೆಯು ಎತ್ತ ಕಡೆಗೂ ಹೋಗಲಾರದು! ಪ್ರತಿಯೊಬ್ಬರು, ಅವನು ಅಥವಾ ಅವಳು ಸರಿ ಎಂಬುದಾಗಿ ಆಲೋಚಿಸುವುದನ್ನು ಮಾಡುತ್ತಿದ್ದರೆ ನಿವಾಸದ ತುಂಬಾ ಗಲಿಬಿಲಿ ಮತ್ತು ಗೊಂದಲಗಳಿರುತ್ತವೆ. ಆದರೆ ದೇವರು ಗೊಂದಲಗಳ ಕರ್ತೃವಲ್ಲ. ಪ್ರಬಲ ಸಭೆಯನ್ನು ಕಟ್ಟುವ, ಮತ್ತು ಇದರಿಂದ ಪ್ರಬಲ ಜನರನ್ನು ಎಬ್ಬಿಸುವ ಇಚ್ಛೆಯೊಡನೆ, ನನ್ನ ಹೃದಯಲ್ಲಿರುವ ಪ್ರೇರಣೆಗಳನ್ನು ಅರ್ಥಮಾಡಿಕೊಳ್ಳುತ್ತೀರಿ ಎಂಬುದಾಗಿ ನಂಬಿ ಈ ಪುಸ್ತಕದ ಮೂಲಕ ''ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯಮಾಡುವುದು'' ಎಂಬ ಸಂದೇಶವನ್ನು ನಾನು ಹಂಚಿಕೊಳ್ಳುತ್ತಿದ್ದೇನೆ.

**ಆಶಿಷ್ ರಾಯ್‌ಚೂರ್**

**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617, +91-80-65970617
Email: contact@apcwo.org
Website: www.apcwo.org